# ಹಂಪಿ ಟೈಮ್ಸ್
HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA








| | | | | | | | |
|---|---|---|---|---|---|---|---|
| ಸಂಪುಟ:01 | ಸಂಚಿಕೆ:193 | ನೋಂದಣಿ ನಂ.:KARKAN27911 | ವಿಜಯನಗರ | 26.12.2023 | ಮಂಗಳವಾರ | ಪುಟ:04 | ಬೆಲೆ:2 |
| Volume:01 | Issue:193 | Reg.No:KARKAN27911 | VIJAYANAGARA | 26.12.2023 | Tuesday | Page:04 | Rs:2 |















# ಶ್ರೀಕೊಟ್ಟೂರೇಶ್ವರಗೆ ದೀಪೋತ್ಸವ

■ **ಹಂಪಿ ಟೈಮ್ಸ್ ಕೊಟ್ಟೂರು**

ಪಟ್ಟಣದ ಆರಾಧ್ಯ ದೇವರು ಶ್ರೀ ಗುರು ಕೊಟ್ಟೂರೇಶ್ವರ ಸ್ವಾಮಿ ಕಾರ್ತಿಕೋತ್ಸವ ಸೋಮವಾರ ಸಂಜೆ 6–ಗಂಟೆ ಸಾವಿರಾರು ಭಕ್ತಸ್ತೋಮದಲ್ಲಿ ವಿಜೃಂಭಣೆಯಿಂದ ನೆರವೇರಿತು.

ಕೊಟ್ಟೂರೇಶ್ವರ ಸ್ವಾಮಿಯ ಕ್ರಿಯಾಮೂರ್ತಿಗಳು ಅರ್ ಎಂ ಶಿವಪ್ರಕಾಶ್ ಸ್ವಾಮಿಗಳು ಕೊಟ್ಟೂರು ದೇವರು, ಮಹಾಲ್ ಮಠ ಅವರು ಶ್ರೀ ಸ್ವಾಮಿಯ ಮಠದ ಮುಂಭಾಗದಲ್ಲಿ ದೀಪ ಹಚ್ಚಿ, ಕಾರ್ತಿಕೋತ್ಸವಕ್ಕೆ ಚಾಲನೆ ನೀಡಿದರು. >>2



# ಕರುಣಾಮಯಿ ಯೇಸು

## ಫಾದರ್ ಥಾಮಸ್ ಮೈಕಲ್ ಹೇಳಿಕೆ|ಕ್ರಿಸ್‌ಮಸ್ ಆಚರಣೆ



■ **ಹಂಪಿ ಟೈಮ್ಸ್ ಹೊಸಪೇಟೆ**

ಕ್ರಿಸ್‌ಮಸ್ ಬರೀ ಆಚರಣೇಯಲ್ಲ, ಯೇಸುವಿನ ಸಂದೇಶ ಮತ್ತು ಮೌಲ್ಯಗಳನ್ನು ಜೀವನದಲ್ಲಿ ಮೈಗೂಡಿಸಿಕೊಳ್ಳುವುದಾಗಿದೆ ಎಂದು ಫಾದರ್ ಥಾಮಸ್ ಮೈಕಲ್ ಹೇಳಿದರು.

ನಗರದ ಕ್ಯಾಥೊಲಿಕ್ ಕ್ರೈಸ್ತ ಚರ್ಚ್‌ನಲ್ಲಿ ಕ್ರಿಸ್‌ಮಸ್ ನಿಮಿತ್ತ ಕರುಣಾಮಯಿ ಯೇಸುವಿನ ಪ್ರಾರ್ಥನೆ ಮಾಡಿ ಮಾತನಾಡಿದರು. ಬಡವರು, ನಿರ್ಗತಿಕರು, ತಳಸಮುದಾಯದವರ ಕೈಹಿದು ನಡೆಸಿದ ಯೇಸು ವಿಧೇಯತೆಯ ಪ್ರತಿರೂಪವಾಗಿದ್ದರು. ತೊಂದರೆ ಕೊಟ್ಟವರನ್ನು ಪ್ರೀತಿಸಿದರೆ ಹೊರತು ದ್ವೇಷಿಸಲಿಲ್ಲ. ಜೀವನದಲ್ಲಿ ಜಿಗುಪ್ಸೆ, ನಿರಾಸೆ ಹೊಂದಿದವರಿಗೆ ಕರುಣೆ ತೋರಿದ್ದರು. ಯೇಸುವಿನ ಆದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಸಾಮಾಜಿ ಮೌಲ್ಯ ಮತ್ತು ಸಾಮಾಜಿಕ ಕಾಳಜಿಯನ್ನು ಪ್ರದರ್ಶಿಸಬೇಕಿದೆ ಎಂದರು.

ಯೇಸುವಿನ ಜನ್ಮದಿನ ಸ್ಮರಣೆ ಮಾಡಿದರು. ಕ್ಯಾರೆಲ್ ಹಾಡುಗಳನ್ನು ಹಾಡಿ ಸಂದೇಶ ಸಾರಿದರು. ದಚರ್ಚ್ ಆವರಣದಲ್ಲಿ ಕೊಟ್ಟಿಗೆ ನಿರ್ಮಿಸಿ ಬಾಲ ಯೇಸುವಿನ ಪ್ರತಿಮೆ ಇರಿಸಿ ಭಕ್ತರ ದರ್ಶನ ಪಡೆಯಲು ಅವಕಾಶ ಕಲ್ಪಸಿಕೊಡಲಾಗಿತ್ತು. ಭಕ್ತರು ಯೇಸುವಿನ ಜನ್ಮದ ಕುರಿತು ಮಾಹಿತಿ ಪಡೆದು ಭಕ್ತಿಯಿಂದ ಕ್ರಿಸ್ ಮಸ್ ಆಚರಿಸಿದರು.

**ಹಗರಿಬೊಮ್ಮನಹಳ್ಳಿ:** ನವ ಜೀವನ ಕಲ್ವಾರಿ ಚರ್ಚ್‌ನ ವಿಭಾಗದ ತಾಲೂಕಿನ ಚಿಂತ್ರಪಳ್ಳಿಯಲ್ಲಿರುವ ಮಹಿಮಾ ಪ್ರಾರ್ಥನಾಲಯದಲ್ಲಿ ಸೋಮವಾರ ಕ್ರಿಸ್‌ಮಾಸ್ ಆಚರಿಸಲಾಯಿತು.

ಪ್ರಾರ್ಥನಾಲಯದ ಪಾಲಕರ ಮಕ್ಕಳೊಂದಿಗೆ ತಹಸೀಲ್ದಾರ್ ಚಂದ್ರಶೇಖರ್ ಶಂಬಣ್ಣ ಗಾಳಿ ಕೇಕ್ ಕತ್ತರಿಸುವ ಮೂಲಕ ಕ್ರಿಸ್ತ ಯೇಸುವಿನ ಜನ್ಮ ದಿನಾಚರಣೆ ಮಾಡಿ, ಎಲ್ಲರಿಗೂ ಶುಭಕೋರಿದರು. ಸಮಾಜದ ಶಾಂತಿಗಾಗಿ ಶ್ರಮಿಸಿದ ಯೇಸುರವರು ಹಾಕಿಕೊಟ್ಟ ದಾರಿಯಲ್ಲಿ ನಡೆಯಬೇಕು ಎಂದರು. ಬಳಿಕ ಪ್ರಾರ್ಥನಾಲಯದ ಫಾಸ್ಟರ್ ಎಲ್.ಹನುಮೇಶ ಸಂದೇಶ ನೀಡಿ, ಪ್ರಪಂಚದ ಶಾಂತಿಗಾಗಿ ಜನಿಸಿದ ಯೇಸು ಪ್ರಭು, ಶಾಂತಿಯ ಮಂತ್ರ ಸಾರಿದರು. ದೇವನಾದ ಪ್ರಭುವು ಮಾನವ ರಕ್ಷಕನಾಗಿದ್ದಾನೆ ಎಂದರು. ಈ ವೇಳೆ ಫಿಲಿಪ್ ಮಾಸ್ಟರ್, ಪೀಟರ್ ಉಜಿನಿ,. ಹಾನ್‌ಗಲ್‌ನ ಫನ್‌ರಾಜ್ ಮತ್ತಿತರರು ಇದ್ದರು.

**ರಾಯಚೂರು:** ಲೋಕ ಕಲ್ಯಾಣಕ್ಕಾಗಿ ಜಗತ್ತಿಗೆ ಶಾಂತಿ, ಸಮಾನತೆ, ಸಹೋದರತ್ವ, ಸಹಬಾಳ್ವೆ ಹಾಗೂ ಮನುಷತ್ವದ ಪಾಠ ಹೇಳಿದ ಯೇಸುವಿನ ತತ್ವ ಸಿದ್ಧಾಂತಗಳು ಜನರ ಬದುಕಿಗೆ ದಾರಿ ದೀಪವಾಗಿವೆ. ನಾವೆಲ್ಲರು ಅವರ ತತ್ವ–ಸಿದ್ಧಾಂಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಕಾಂಗ್ರೆಸ್ ರಾಜ್ಯಯುವ ಮುಖಂಡರಾದ ರವಿ ಬೋಸರಾಜು ಅಭಿಪ್ರಾಯ ವ್ಯಕ್ತಪಡಿಸಿದರು.

ಇನ್ಫೆಂಟ್ ಜೀಸಸ್ ಶಿಕ್ಷಣ ಸಂಸ್ಥೆಯ ಮುಖ್ಯಸ್ಥರಾದ ಫಾ. ಮರಿಸ್ವಾಮಿ, ಸೆಂಟ್ರಲ್ ಚರ್ಚ್ ನ ರೆವರೆಂಡ್ ಸೀಮೋನ್, ಸಂತಮೇರಿ ಸಂಸ್ಥೆಯ ಸಿಸ್ಟರ್ ಎಲಿಶಾ ಸೇರಿದಂತೆ ವಿವಿಧ ಚರ್ಚ್ ಗಳಿಗೆ ಭೇಟಿ ಕೇಕ್ ನೀಡಿ ಕ್ರಿಸ್–ಮಸ್ ಹಬ್ಬದ ಶುಭಾಷಯ ತಿಳಿಸಿ ಕುಷಲೋಪರಿ ವಿಚಾರಿಸಿದರು. ಎಲ್ಲಾ ಚರ್ಚ್ ನಲ್ಲಿ ನಾಡಿನ ಸಮಸ್ತ ಜನತೆಗೆ ಒಳಿತಾಗಲಿ ಎಂದು ಪ್ರಾರ್ಥಿಸಿದರು.

# ಅಯೋಧ್ಯೆಯ ಶ್ರೀರಾಮ ಮಂದಿರ ಹಿಂದುಗಳ ಸ್ವಾಭಿಮಾನದ ಸಂಕೇತ

## ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಉತ್ತರ ಪ್ರಾಂತ್ಯ ಗ್ರಾಮ ವಿಕಾಸ ಸಂಯೋಜಕ ರಾಜಶೇಖರ ಹೇಳಿಕೆ



■ **ಹಂಪಿ ಟೈಮ್ಸ್ ಕೂಡ್ಲಿಗಿ**

ಅಯೋಧ್ಯೆಯ ಶ್ರೀರಾಮ ಮಂದಿರ ಸಮಸ್ತ ಹಿಂದುಗಳ ಸ್ವಾಭಿಮಾನದ ಸಂಕೇತವಾಗಿದೆ ಎಂದು ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಉತ್ತರ ಪ್ರಾಂತ್ಯ ಗ್ರಾಮ ವಿಕಾಸ ಸಂಯೋಜಕ ರಾಜಶೇಖರ ಜೀ ತಿಳಿಸಿದರು.

ಪಟ್ಟಣದ ತರಳಬಾಳು ವಿದ್ಯಾ ಸಂಸ್ಥೆ ಆವರಣದಲ್ಲಿ ಭಾನುವಾರ ಸಂಜೆ ಶ್ರೀರಾಮ ಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್ ಹಾಗೂ ವಿಶ್ವ ಹಿಂದು ಪರಿಷತ್ ವತಿಯಿಂದ ಶ್ರೀರಾಮ ಜನ್ಮಭೂಮಿ ಅಯೋಧ್ಯೆಯ ಪವಿತ್ರ ಮಂತ್ರಾಕ್ಷತೆಯನ್ನ ತಾಲೂಕಿನ ಗ್ರಾಮಗಳಿಗೆ ವಿತರಣಾ ಕಾರ್ಯಕ್ರಮದಲ್ಲಿ ಮಾತನಾಡಿದರು.

ಈ ಭರತ ಭೂಮಿಯಲ್ಲಿ ಶ್ರೀರಾಮನಿಗೆ ಹಿಂದುಗಳು ವಿಶೇಷವಾದ ಸ್ಥಾನಮಾನ ನೀಡಿದ್ದು, ಶ್ರೀರಾಮ ತನಗಾಗಿ ಬದುಕದೆ, ಪರರಿಗಾಗಿ ಬದುಕಿ ಇತಿಹಾಸದ ಯುಗಪುರುಷನಾಗಿ ಇಂದಿಗೂ ನಮ್ಮೆಲ್ಲರ ಆಧ್ಯಾತ್ಮಿಕ ಶಕ್ತಿಯಾಗಿ ನೆಲೆಗೊಂಡಿದ್ದಾನೆ ಎಂದು ತಿಳಿಸಿದರು.

ಸ್ವಾತಂತ್ರ್ಯ ನಂತರ ಪ್ರಭು ಶ್ರೀರಾಮನ ಭವ್ಯ ಮಂದಿರ ನಿರ್ಮಾಣವಾಗಬೇಕಿತ್ತು. ಆದರೆ ಭಾರತೀಯರ ದುರಾದೃಷ್ಟ, ಕಾರಣ ನಮ್ಮನಾಳಿದ ಪಕ್ಷವು ವ್ಯವಸ್ಥಿತ ಸಂಚಿನಿಂದ ರಾಮ ಮಂದಿರ ನೆನೆಗುದಿಗೆ ಬಿತ್ತು, ಕಾರಣ ಭಾರತೀಯರಿಗೆ ಸ್ವಾಭಿಮಾನದ ಕೊರತೆ ಎದ್ದು ಕಾಣುತ್ತಿತ್ತು, ಹಿಂದುಗಳಲ್ಲೆ ಜಾತಿಯ ವಿಷ ಬೀಜ ಬಿತ್ತಿ ನಮ್ಮಲ್ಲಿಯೇ ಹೊಡೆದಾಟಕ್ಕೆ ಬಿಟ್ಟು ಹಿಂದುಗಳ ಆರಾಧ್ಯ ದೈವ ಮರ್ಯಾದ ಪುರುಷನ ರಾಮನ ಮಂದಿರ ಆಗದಂತೆ ವಿವಾದ ಸೃಷ್ಟಿಸಿದರು. ಸುಮಾರು ವರ್ಷಗಳು ಕಳೆದ ನಂತರ ಪ್ರಧಾನಿ ಮೋದಿಯವರ ನೇತೃತ್ವದಲ್ಲಿ ಶ್ರೀರಾಮನ ಮಂದಿರ ನಿರ್ಮಾಣವಾಗಿದ್ದು ಈಗ ಇತಿಹಾಸ. ಇಂಥಹ ಐತಿಹಾಸಿಕ ದಿನವನ್ನು ದೇಶದ ಸಮಸ್ತ ಹಿಂದುಗಳು ಎದುರು ನೋಡುತ್ತಿದ್ದು, ಇದೇ ಜನವರಿ 22 ರಂದು ರಾಮ ಮಂದಿರ ಅಯೋಧ್ಯೆಯಲ್ಲಿ ವಿದ್ಯುಕ್ತವಾಗಿ ಲೋಕಾರ್ಪಣೆ ಗೊಳ್ಳಲಿದ್ದು, ಪ್ರಭು ಶ್ರೀರಾಮನ ಮಂದಿರ ಮುಂದಿನ ದಿನಗಳಲ್ಲಿ ಸಮಸ್ತ ಭಾರತೀಯರಿಗೂ ಸ್ವಾಭಿಮಾನದ ಪ್ರತೀಕವಾಗಲಿದೆ,ಇದರಿಂದಾಗಿ ಹಿಂದುಗಳಲ್ಲಿ ಏಕತೆ ಹಾಗೂ ಸಂಘಟನೆಯ ಶಕ್ತಿ ದೊರೆಯಲಿದೆ ಎಂದು ಅಭಿಪ್ರಾಯ ಪಟ್ಟರು.

ಇದೇ ಸಂಧರ್ಭದಲ್ಲಿ ಅಯೋಧ್ಯೆಯ ಶ್ರೀರಾಮ ಮಂದಿರ ಉದ್ಘಾಟನೆಗಾಗಿ ತಾಲೂಕಿನ ಪ್ರತಿ ಗ್ರಾಮದ ಪ್ರತಿ ಮನೆಗೂ ಪ್ರಭು ಶ್ರೀರಾಮನ ಪವಿತ್ರ ಮಂತ್ರಾಕ್ಷತೆ ಹಾಗೂ ಆಮಂತ್ರಿಸಲು ಸ್ವಯಂ ಸೇವಕರು ಭೇಟಿ ನೀಡಲಿದ್ದು.ಇದೇ 30 ನೇ ತಾರೀಕಿನಿಂದ ಗ್ರಾಮದ ಆಂಜನೇಯ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿ ರಾಮ ಮಂದಿರ ಉದ್ಘಾಟನೆ ಆಮಂತ್ರಣ ಹಾಗೂ ಮಂತ್ರಾಕ್ಷತೆ ನೀಡಲಿದ್ದಾರೆ ಎಂದು ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಜಿಲ್ಲಾ ಸಾಮರಸ್ಯ ಸಂಯೋಜಕ ಅನಂತ ಪದ್ಮನಾಭ ಶೆಟ್ಟಿ ತಿಳಿಸಿದರು.

ರಾಷ್ಟ್ರೀಯ ಸ್ವಯಂ ಸೇವಕ ಸಂಘದ ತಾಲೂಕು ಕಾರ್ಯಕಾರಿಣಿ ಸದಸ್ಯ ರಾಮುಕಾಟ್ವಾ, ಸಂಘದ ಪ್ರಮುಖರಾದ ವೆಂಕಟೇಶ, ಚೌಡಪ್ಪ,ಕೆ.ಬಿ.ಭೀಮಣ್ಣ,ಗ್ಯಾಸ್ ಶ್ರೀನಿವಾಸ್, ಶಂಕರ್ ಕಾಟ್ವಾ, ಸೂರ್ಯ ಪಾಪಣ್ಣ,ಕೆ.ಎಂ.ತಿಪ್ಪೇಸ್ವಾಮಿ, ಸಪ್ತಗಿರಿ, ಗುಳಿಗಿ ವೀರೇಶ್, ಬಂಡ್ರಿ ನವೀನ, ಪ್ರಹ್ಲಾದ ಶೆಟ್ಟಿ, ಭಜರಂಗದಳ ಸದಸ್ಯ ದುರುಗೇಶ್, ಅಕ್ಕಿ ರಾಘವೇಂದ್ರ, ಬಣಕಾರ ಶಿವಣ್ಣ, ಆದಿತ್ಯ ಸೇರಿದಂತೆ ಅನೇಕರು ಇದ್ದರು.

**ಮೈಕ್ರೋ ನ್ಯೂಸ್**

# ಡಿ.26ರಂದು ವಿಜಯನಗರದಲ್ಲಿ ಕಂದಾಯ ಸಚಿವರ ಪ್ರವಾಸ

**ಹಂಪಿ ಟೈಮ್ಸ್ ಹೊಸಪೇಟೆ**

ಕಂದಾಯ ಸಚಿವ ಕೃಷ್ಣ ಬೈರೇಗೌಡ ಅವರು ಡಿ. 26 ರಂದು ವಿಜಯನಗರ ಜಿಲ್ಲೆಯಲ್ಲಿ ಪ್ರವಾಸ ಹಮ್ಮಿಕೊಂಡಿದ್ದಾರೆ.



ಡಿ.26ರಂದು ಮಧ್ಯಾಹ್ನ 1 ಗಂಟೆಗೆ ಹೊಸಪೇಟೆಗೆ ಆಗಮಿಸಿ, 1.30 ರಿಂದ ಸಂಜೆ 6 ಗಂಟೆಯವರೆಗೆ ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ವಿಜಯನಗರ ಜಿಲ್ಲೆಯ ಕಂದಾಯ ಇಲಾಖೆಯ ಪ್ರಗತಿ ಪರಿಶೀಲನಾ ಸಭೆ ನಡೆಸುವರು. ಬಳಿಕ 6.30ಕ್ಕೆ ಬೆಂಗಳೂರಿಗೆ ಪ್ರಯಾಣ ಬೆಳಸಲಿದ್ದಾರೆ.

# ಡಾ.ಸುಧಾಕರಗೆ ಭಾರತ್ ಸೇವಾ ಪುರಸ್ಕಾರ

**ಹಂಪಿ ಟೈಮ್ಸ್ ಹೊಸಪೇಟೆ:**

ಶ್ರೀ ತರಳಬಾಳು ಜಗದ್ಗುರು ವಿದ್ಯಾಸಂಸ್ಥೆಯ ದೈಹಿಕ ಶಿಕ್ಷಣ ಶಿಕ್ಷಕ, ಹಂಪಿ ಟೈಮ್ಸ್‌ನ ಕ್ರೀಡಾ ವಿಭಾಗದ ಲೇಖಕರು ಆದ ಡಾ.ಸುಧಾಕರ. ಜಿ.ಲಕ್ಕವಳ್ಳಿ ಇವರಿಗೆ ಭಾರತ ಸರ್ಕಾರದಿಂದ ಮಾನ್ಯತೆ ಪಡೆದ ಕೇರಳ ಮೂಲದ ವೆಯಿಲ್ ಫೌಂಡೇಶನ್(ರಿ) ರವರು ಸಾಹಿತ್ಯ, ಬರಹ ಕೊಡುಗೆಗಳನ್ನು ಪರಿಶೀಲಿಸಿ ಭಾರತ ಸೇವಾ ಪುರಸ್ಕಾರ–2023 ರ ಉತ್ತಮ ಬರಹಗಾರ ದೈಹಿಕ ಮತ್ತು ಆರೋಗ್ಯ ಶಿಕ್ಷಣ ಪ್ರಶಸ್ತಿ ನೀಡಿ ಗೌರವಿಸಿದೆ. ಪ್ರಶಸ್ತಿ ಪುರಸ್ಕೃತರು ಈ ಪ್ರಶಸ್ತಿಯನ್ನು ಭಾರತದ ವೀರಯೋಧರಿಗೆ ಅರ್ಪಿಸಿರುತ್ತಾರೆ.



# ಗುರು ಹಚ್ಚಿದ ಅಂತರಂಗದ ದೀಪಕ್ಕೆ ಬೆಲೆ ಕಟ್ಟಲಾಗದು

## ಗವಿಮಠದ ಶ್ರೀಗವಿಸಿದ್ದೇಶ್ವರ ಮಹಾಸ್ವಾಮಿಗಳ ನುಡಿ । ಕೊಪ್ಪಳದಲ್ಲಿ ಗುರುವಂದನೆ ಹಾಗೂ ಸ್ನೇಹ ಸಮ್ಮಿಲನ ಕಾರ್ಯಕ್ರಮ

■ **ಹಂಪಿ ಟೈಮ್ಸ್ ಕೊಪ್ಪಳ**

ಗುರುಗಳು ನಮ್ಮ ಅಂತರಂಗದಲ್ಲಿ ಹಚ್ಚಿದ ದೀಪ ಸದಾ ಬೆಳಗುತ್ತದೆ. ಅವರಿಗೆ ನಾವು ಹಾಕುವ ಬಾಡುವ ಮಾಲೆ. ಹರಿಯುವ ಶಾಲು ಯಾವುದಕ್ಕೂ ಸಾಲದು, ಗುರುವಿನ ಬೆಳಕಿಗೆ ಬೆಲೆಯೂ ಕಟ್ಟಲಾಗದು ಎಂದು ಗವಿಮಠದ ಶ್ರೀಗವಿಸಿದ್ದೇಶ್ವರ ಮಹಾಸ್ವಾಮಿಗಳು ಹೇಳಿದರು.

ಕೊಪ್ಪಳದ ಗವಿಮಠದ ಆವರಣದಲ್ಲಿ 1997–98 ನೆಯ ಸಾಲಿನ ಅಂತಿಮ ಬಿಎ ವಿದ್ಯಾರ್ಥಿಗಳಿಂದ ಗುರುವಂದನೆ ಹಾಗು ಸ್ನೇಹಸಮ್ಮೀಲನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ನಮ್ಮೆಲ್ಲರಿಗೂ ಅಂತಃಕರಣಕ್ಕೆ ಜ್ಞಾನ ಕಲ್ಪಿಸಿದ ಗುರುಗಳು ಹಾಗು ಸ್ನೇಹಿತರಿಗೆ ಸನ್ಮಾನಿಸುತ್ತಿರುವ ಹೃದಯಸ್ಪರ್ಶಿ ಕಾರ್ಯಕ್ರಮ. ಜಗತ್ತಿನಲ್ಲಿ ನಾವೆಲ್ಲರು ಹಲವರ ಋಣದಲ್ಲಿದ್ದೇವೆ. ಅದನ್ನು ತೀರಿಸಲಾಗುದು ಎಂದರು.

ತಂದೆ ಹಾಗು ತಾಯಿಗಳ ಋಣ ತೀರಿಸಲು ಯಾರಿಂದಲೂ ಸಾಧ್ಯವಿಲ್ಲ. ಅವರು ನಮಗೆ ರಿಯಲ್ ಹಿರೋಗಳು. ನಮಗೆ ಕಲಿಸಿದ ಗುರುಗಳು ನಮಗೆ ಅಂತರಂಗ ಪಾಠ ಮಾಡಿದ ಗುರುಗಳ ನಮಗೆ ಸಂಸ್ಕಾರ ಕಲಿಸಿದ್ದಾರೆ. ಗುರುಗಳು ಅಮೃತವನ್ನು ಕಲಿತು ನಮಗೆ ಬೇಕಾದಷ್ಟು ಜ್ಞಾನ ನೀಡಿದ್ದಾರೆ. ಅವರ ಮಾಡಿದ ಸೇವೆ ನಮಗೆ ಸ್ಮರಣೀಯವಾಗಿದೆ.




ಮನುಷ್ಯನಿಗೆ ಮೇಲೆರಲು ಉತ್ಸಾಹ ಎಂಬ ಗಾಳಿ ಬೇಕು. ಜೀವನದಲ್ಲಿ ಏರುಪೇರು ಇರುತ್ತದೆ. ಏನೇ ಬರಲಿ ಜೀವನ ಉತ್ಸಾಹ ಕಳೆದುಕೊಳ್ಳಬಾರದು. ಜೀವನದಲ್ಲಿ ಆರೋಗ್ಯ, ನೆಮ್ಮದಿ ಇರಲಿ ಎಂದು ಹೇಳಿದರು.

**ಬೆಳ್ಳಿ ಬೆತ್ತ ತಿರಸ್ಕಾರ:** ಸ್ನೇಹಿತರ ನೀಡಿದ ಬೆಳ್ಳಿ ಬೆತ್ತವನ್ನು ನಯವಾಗಿ ತಿರಸ್ಕರಿಸಿದ ಸ್ವಾಮಿಜಿಗಳು. ನಾನು ನಿಮ್ಮ ಸ್ನೇಹಕ್ಕೆ ಮೊದಲು ಆದ್ಯತೆ. ಗವಿಸಿದ್ದೇಶ ನನಗೆ ಎರಡು ಜತೆ ಬಟ್ಟೆ. ಎರಡು ಹೊತ್ತು ಊಟ ಕೊಟ್ಟಿದ್ದಾನೆ. ಅಷ್ಟು ನನ್ನ ಜೀವನಕ್ಕೆ ಸಾಕು ಎಂದರು.

ನಿವೃತ್ತ ಅರ್ಥಶಾಸ್ತ್ರ ಉಪನ್ಯಾಸಕರಾದ ಎಲ್.ಎಫ್. ಪಾಟೀಲ್ ಅವರು ಮಾತನಾಡಿ, ಅಂತರಂಗ ಶುದ್ಧಿ ಮಾಡಿಕೊಳ್ಳಬೇಕು. ವಯಸ್ಸಾಯಿತು ಎನ್ನುವುದಕ್ಕಿಂತ ಅಂತರಂಗವನ್ನು ತೆರೆದುಕೊಳ್ಳುತ್ತಾ, ಜ್ಞಾನಮಾರ್ಗದಲ್ಲಿ ಜೀವನ ನಡೆಸಬೇಕು ಎಂದರು.

ಹಿರಿಯ ಸಾಹಿತಿ ಅಲ್ಲಮಪ್ರಭು ಬೆಟ್ಟದೂರು ಮಾತನಾಡಿ, ಗುರುಗಳ ಬಗ್ಗೆ ನಿಮ್ಮ ಪ್ರೀತಿ ಮತ್ತು ಕಾಳಜಿ ನಮ್ಮನ್ನು ಮತ್ತಷ್ಟು ಉಲ್ಲಾಸ ಭರಿತರನ್ನಾಗಿ ಮಾಡಿದೆ ಎಂದರು.

ಗುರುಗಳಾದ ಬಿ.ಎಸ್. ಹಡಗಲಿ, ಪರೀಕ್ಷಿತರಾಜ ದಯಾನಂದ ಸಾಳುಂಕಿ ಅವರು ಮಾತನಾಡಿದರು. ವೀರೇಶ ದೇವರ ಅಧ್ಯಕ್ಷತೆವಹಿಸಿದ್ದರು.

ಎಂ ಎಸ್ ಬಾಚಲಾಪುರ, ವೀರೇಶ ಕಾತರಕಿ, ಐ.ಬಿ. ಅಂಗಡಿ, ಎಂ ಆರ್ ಹವಳದ, ಕೆ ಸಿ ಮೇಟಿ, ಗವಿಸಿದ್ದಪ್ಪ ಕೊಪ್ಪಳ. ನಾಮದೇವಪ್ಪ ಉಂಕಿ, ಎಸ್ ಎಫ್ ಜಾಲಿಹಾಳ. ಎಸ್ ಬಿ ಕೊತಬಾಳ. ವಿರುಪಾಕ್ಷಪ್ಪ ಗಡ್ಡದ ಇದ್ದರು. ಸೋಮರಡ್ಡಿ ಅಳವಂಡಿ ನಿರೂಪಿಸಿದರು. ಗುರುಗಳ ಸನ್ಮಾನ ಕಾರ್ಯಕ್ರಮವನ್ನು ವೀಣಾ ಮತ್ತು ರಾಜು ಕಬಾಡಿ ಅವರು ನಡೆಸಿಕೊಟ್ಟರು. ಸುಜಾತ ಕರಣಂ ಪ್ರಾರ್ಥಿಸಿದರು. ಝಾಕೀರ ಸ್ವಾಗತಿಸಿದರು. ರಾಚಮ್ಮ ಪ್ರಸ್ತಾವಿಕ ಮಾತನಾಡಿದರು. ಶ್ರೀಶೈಲ ಅಳವಂಡಿ ವಂದಿಸಿದರು.

**ಪ್ರಸಾದ ನಿಲಯದ ಒಂದು ದಿನದ ಖರ್ಚನ್ನು 1997–98 ನೇ ಸಾಲಿನ ಪದವಿ ಅಂತಿಮ ವರ್ಷದ ವಿದ್ಯಾರ್ಥಿಗಳು ಪ್ರತಿ ವರ್ಷ ನೀಡುವ ವಾಗ್ದಾನ ಮಾಡಿದರು. ಪ್ರತಿ ವರ್ಷವೂ ಡಿ. 25 ರಂದು ಸೇರಿ, ಪ್ರಸಾದ ನಿಲಯದ ವೆಚ್ಚವನ್ನು ಭರಿಸಲು ತೀರ್ಮಾನಿಸಲಾಯಿತು. ಇದಕ್ಕಾಗಿ ತಗಲುವ ವೆಚ್ಚವನ್ನು ಪ್ರತಿಯೊಬ್ಬರು ಶೇರ್ ಮಾಡಿಕೊಳ್ಳಲು ಸರ್ವರು ಸಮ್ಮತಿ ಸೂಚಿಸಿದರು.**

## ವಚನ ಅರಿವು

### ಒಂದೇ ದೈವ

**ದೇವನೊಬ್ಬ, ನಾಮ ಹಲವು,**

**ಪರಮ ಪತಿವ್ರತೆಗೆ ಗಂಡನೊಬ್ಬ.**

**ಮತ್ತೊಂದಕ್ಕೆರಗಿದಡೆ, ಕಿವಿ-ಮೂಗ ಕೊಯ್ವನು.**

**ಹಲವು ದೈವದ ಎಂಜಲ ತಿಂಬವರನೇನೆಂಬೆ,**

**ಕೂಡಲಸಂಗಮದೇವಾ!**

– ಬಸವಣ್ಣ

ದೇವರು ಒಬ್ಬನೇ ಇದ್ದಾನೆ. ಅದೇ ಜಗತ್ತಿನ ಚೈತನ್ಯಾತ್ಮಕ ಶಕ್ತಿ. ನೂರಾರು ಹೆಸರುಗಳಿಂದ ಕರೆಯುವ ಪ್ರಯತ್ನ ಮಾಡುತ್ತೇವೆ ಅಷ್ಟೆ.
ಶರಣಸತಿ, ಲಿಂಗಪತಿ ಭಾವದ ವಚನ. ತನು, ಮನ ಶುದ್ಧವಾಗಿಟ್ಟುಕೊಂಡು, ತನ್ನ ಗಂಡನಿಗೆ ಮೀಸಲಾಗಿ ಬದುಕುವ ಹೆಂಡತಿ ಪತಿವ್ರತೆಯಾಗಿರುತ್ತಾಳೆ. ಇದಕ್ಕೆ ಗಂಡು ಹೊರತಾಗಿರಬಾರದು. ಆಕೆ ಅಥವಾ ಅವನು ಪ್ರಾಮಾಣಿಕವಾಗಿರದೆ ತಪ್ಪು ದಾರಿ ಹಿಡಿದು ಬೇರೆ ಸಂಗ ಬಯಸಿದರೆ ಅನೈತಿಕವಾಗುತ್ತದೆ. ಅಂತಹವರಿಗೆ ಕಿವಿ-ಮೂಗು ಕೊಯ್ದು ವಿಕಾರಗೊಳಿಸುವ ಶಿಕ್ಷೆ ಅಂದಿನ ಸಮಾಜದಲ್ಲಿ ನೀಡಲಾಗುತ್ತಿತ್ತು. ಅವರು ಇಡೀ ಜೀವನಪೂರ್ತಿ ಅವಮಾನ, ದುಃಖ, ನೋವು ಅನುಭವಿಸುತ್ತ ಕೊರಗಬೇಕಾಗುತ್ತದೆ. ಆದ್ದರಿಂದ ತಪ್ಪು ದಾರಿ ಹಿಡಿಯದೇ ಸತ್ಯ, ಶುದ್ಧ, ಪ್ರಾಮಾಣಿಕತೆ ಯಿಂದ ಬದುಕುವದನ್ನು ಕಲಿಯಬೇಕು. ಒಂದೇ ಜೀವನ ಎಂಬ ಸತ್ಯವನ್ನು ಅರಿತು ಒಬ್ಬ ಗಂಡ, ಒಂದೇ ದೈವ ಅದು ಇಷ್ಟಲಿಂಗ ಎನ್ನುವ ಸತ್ಯ ತಿಳಿದು ನಂಬಿ ಬದುಕಬೇಕು. ಇಲ್ಲಿ ಲಿಂಗ ಗಂಡನಾಗಿ ಅದಕ್ಕೆ ನಿಷ್ಠೆಯಿಂದಿರುವ ಸತಿಯಾಗಿ ಶರಣ ಇರಬೇಕು ಎನ್ನುವ ಭಾವ ಈ ವಚನದಲ್ಲಿದೆ.

**(ಡಾ. ನಂದೀಶ್ವರ ದಂಡೆ ಅವರ ವಚನ ಜೀವನ ಮಾರ್ಗ ಪುಸ್ತಕದಿಂದ)**

## ಶ್ರೀ ಕೊಟ್ಟೂರೇಶ್ವರಗೆ ದೀಪೋತ್ಸವ

**ಮೊದಲ ಪುಟದಿಂದ**

ಕಾರ್ತಿಕೋತ್ಸವ ಚಾಲನೆ ವೇಳೆ ಶಾಸಕರು ಕೆ. ನೇಮಿರಾಜ್ ನಾಯ್ಕ್, ಧಾರ್ಮಿಕ ದತ್ತಿ ಇಲಾಖೆ ಆಡಳಿತ ಅಧಿಕಾರಿಗಳು ಕೃಷ್ಣಪ್ಪ, ಎಂ ಎಂ ಜೆ ಹರ್ಷವರ್ಧನ್ ಮಾಜಿ ಜಿ ಪಂ ಸದಸ್ಯರು.ಧರ್ಮಕರ್ತರು ಸಿಎಚ್ಎಂ ಗಂಗಾಧರ ಸೇರಿದಂತೆ ಕಟ್ಟೀಮನಿ ದೈವಸ್ಥರು ,ಆಯಗಾರರು ಹಾಗೂ ಅರ್ಚಕರು ಕಾರ್ತಿಕೋತ್ಸವ ಚಾಲನೆ ವೇಳೆ ಹಾಜರಿದ್ದರು.
ದೀಪೋತ್ಸವಕ್ಕೆ ಚಾಲನೆ ದೊರೆಯುತ್ತಿದ್ದಂತೆ ಕಾರ್ತಿಕೋತ್ಸವಕ್ಕೆ ಆಗಮಿಸಿದ ಭಕ್ತರು ಎಣ್ಣೆ ಬತ್ತಿ ಹಾಕಿ ದೀಪ ಬೆಳಗಿಸಿ ಭಕ್ತಿ ಸಮರ್ಪಿಸಿದರು , ಇನ್ನೂ ಕೆಲ ಭಕ್ತರು ಶ್ರೀ ಕೊಟ್ಟೂರೇಶ್ವರ ಸ್ವಾಮಿಯ ಗುಡಿಯ ಮುಂಭಾಗದಲ್ಲಿ ಟನ್ ಗಿಂತ ಹೆಚ್ಚು ಕೊಬ್ಬರಿಯನ್ನು ಸುಟ್ಟು ಭಕ್ತಿ ಸಮರ್ಪಿಸಿದರು.
ಹಿರೇಮಠ, ಗಚ್ಚಿನ ಮಠ, ತೊಟ್ಟಿಲು ಮಠಗಳು ಸೇರಿದಂತೆ ಪಟ್ಟಣದ ಪ್ರಮುಖ ಬೀದಿಗಳಲ್ಲಿ ದೀಪಗಳು ಜಗಮಗಿಸಿದವು. ಹರಪನಹಳ್ಳಿ, ದಾವಣಗೆರೆ,ರಾಣಿಬೆನ್ನೂರು ,ಹುಬ್ಬಳ್ಳಿ, ಧಾರವಾಡ, ಗದಗ ,ಚಿತ್ರದುರ್ಗ, ತುಮಕೂರು, ಬೆಂಗಳೂರು, ಕೂಡ್ಲಿಗಿ ಬಳ್ಳಾರಿ, ವಿಜಯ ನಗರಸೇರಿದಂತೆ ರಾಜ್ಯದ ವಿವಿಧ ಭಾಗಗಳಿಂದ ಬಂದಿದ್ದ ಭಕ್ತರು ಬೆಳಿಗ್ಗೆಯಿಂದ ಸರತಿ ಸಾಲಿನಲ್ಲಿ ನಿಂತು ಶ್ರೀ ಸ್ವಾಮಿಯ ದರ್ಶನ ಪಡೆದರು.



## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

ಸಂಪಾದಕರು

**ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**

ಇ-ಮೇಲ್:hampitimes@gmail.com

M: 9448633038

# ನಿಮ್ಮ ಮನೆಗೆ ನೀವೇ ಸರ್ವಸ್ವ...

## ಮನೆಯಲ್ಲಿ ಕಾಯುತ್ತಿರುತ್ತಾರೆ.... ನಿಮ್ಮ ಸುರಕ್ಷಿತ ಮರಳುವಿಕೆಗೆ (ರಸ್ತೆ ಸುರಕ್ಷತಾ ಸಪ್ತಾಹದ ಅಂಗವಾಗಿ)

ವಯಸ್ಸಾದ ಅಪ್ಪ ಅಮ್ಮ ಬೀದಿಯ ಕೊನೆಯವರೆಗೂ ತಮ್ಮ ದೃಷ್ಟಿಯನ್ನು ಹಾಯಿಸಿ ಕಾಯುತ್ತಿರುತ್ತಾರೆ ಮಕ್ಕಳಿಗಾಗಿ. ಮನೆಯಲ್ಲಿ ಹೆಂಡತಿ ಮಕ್ಕಳು ಕಾಯುತ್ತಿರುತ್ತಾರೆ ಕೆಲಸಕ್ಕೆ ಹೊರಹೋದ ಅಪ್ಪ ಮನೆಗೆ ಬರಲೆಂದು. ಶಾಲೆಗೆ ಹೋದ ಪುಟ್ಟ ಮಕ್ಕಳು ಸುರಕ್ಷಿತವಾಗಿ ಬರಲೆಂದು ತಾಯಿ ಕಾಯುತ್ತಾಳೆ. ಆಫೀಸಿಗೆ, ಶಾಲೆ ಕಾಲೇಜುಗಳಿಗೆ ಹೋದ ಹೆಣ್ಣು ಮಕ್ಕಳು ಮನೆಗೆ ಸುರಕ್ಷಿತವಾಗಿ ಬರಲಿ ಎಂದು ಕಾಯುತ್ತಿರುತ್ತಾರೆ ಮನೆಯ ಜನ. ಅವರೆಲ್ಲರ ಕಾಳಜಿಯ ವಿಷಯ ಒಂದೇ .....ಅದು ಸುರಕ್ಷತೆ.

ಅತಿ ಹೆಚ್ಚಿನ ಜನಸಂಖ್ಯೆಯನ್ನು ಹೊಂದಿರುವ ದೇಶ ನಮ್ಮದು. ದೈನಂದಿನ ಬದುಕಿನ ನಿರ್ವಹಣೆಗಾಗಿ ಜನರು ತಮ್ಮ ಮನೆಯನ್ನು ಬಿಟ್ಟು ಕೆಲಸಕ್ಕೆ ಹೋಗಲೇಬೇಕು. ಸಾಕಷ್ಟು ಉತ್ತಮ ರಸ್ತೆಗಳು, ಸುರಕ್ಷತೆಗಾಗಿ ಮಾಡಿರುವ ನಿಯಮಗಳು ವಾಹನಗಳಲ್ಲಿ ಸುರಕ್ಷತೆಗಾಗಿ ಅಳವಡಿಸಿರುವ ಹೊಸ ತಂತ್ರಜ್ಞಾನಗಳು ಹೀಗೆ ಹತ್ತು ಹಲವಾರು ಸುರಕ್ಷತಾ ವ್ಯವಸ್ಥೆಗಳು ಇರುವಾಗ್ಯೂ ಅಪಘಾತಗಳು ಸಂಭವಿಸುತ್ತಿವೆ. ಬಹುತೇಕ ಅಪಘಾತಗಳು ಸಂಭವಿಸುವುದು ಆಕಸ್ಮಿಕವಾಗಿದ್ದರೂ ಹಲವು ಬಾರಿ ರಸ್ತೆಯ ಗುಂಡಿಗಳಿಂದ, ವಾಹನ ಸವಾರರ ನಿರ್ಲಕ್ಷದಿಂದ, ಮಧ್ಯಪಾನ ಮಾಡಿ ಗಾಡಿಗಳನ್ನು ಚಲಾಯಿಸುವುದರಿಂದ, ನಿಯಮಗಳ ಪಾಲನೆ ಮಾಡದಿರುವುದರಿಂದ, ಕಾನೂನುಬಾಹಿರವಾಗಿ ಅಲ್ಲಲ್ಲಿ ಮಾಡಿರುವ ದುರಸ್ತಿ ಕಾರ್ಯಗಳಿಂದ ಹೀಗೆ ಹತ್ತು ಹಲವು ಕಾರಣಗಳನ್ನು ಹುಡುಕಬಹುದು. ಆದರೆ ಇದೆಲ್ಲಕ್ಕಿಂತಲೂ ಮುಖ್ಯವಾಗಿ ಅಪಘಾತಗಳಿಗೆ ಕಾರಣವಾಗಿರುವುದು ನಮ್ಮ ಅವಸರದ, ಆತುರದ ಸ್ವಭಾವ.

ಅವಸರವೇ ಅಪಘಾತಕ್ಕೆ ಕಾರಣ ಎಂಬ ಘೋಷವಾಕ್ಯವನ್ನು ನಾವೆಲ್ಲ ನೋಡಿರುತ್ತೇವೆ. ರಸ್ತೆಗೆ ಇಳಿಯುವ ಮುನ್ನವೇ ಅವಸರವನ್ನು ಕಟ್ಟಿಕೊಂಡು ವಾಹನಗಳ ಸಂದಿಗೊಂದಿಗಳಲ್ಲಿ ತೂರಿಕೊಂಡು ಗಮ್ಯವನ್ನು ತಲುಪುವ ಅವಸರದಲ್ಲಿರುವ ದ್ವಿಚಕ್ರ ವಾಹನ ಸವಾರರು ಹೆಚ್ಚಾಗಿ ಅಪಘಾತಗಳಿಗೆ ಕಾರಣರಾಗುವುದರ ಜೊತೆಜೊತೆಗೆ ಈ ಅಪಘಾತಗಳ ಬಲಿಪಶುಗಳು ಕೂಡ ಅವರೇ ಆಗಿರುತ್ತಾರೆ. ಇಂತಹ ದ್ವಿಚಕ್ರ ವಾಹನ ಸವಾರಿ ಮಾಡುವ ಜನರಲ್ಲಿ... ಹೆಲ್ಮೆಟ್ ಧರಿಸಿದರೆ ಹೇರ್ ಸ್ಟೈಲ್ ಕೆಡುತ್ತದೆ ಎಂಬುದು ಮೊದಲ ಕಾರಣವಾದರೆ ಕೂದಲು ಉದುರುತ್ತದೆ, ಬೆವರು ಸುರಿಯುವುದು ಎಂಬುದು ಇನ್ನಿತರ ಕಾರಣಗಳಾಗಿರುತ್ತವೆ. ಬಹುತೇಕ ದ್ವಿಚಕ್ರ ವಾಹನಗಳ ಅಪಘಾತಗಳಲ್ಲಿ ವಾಹನ ಸವಾರರು ತಲೆಗೆ ಪೆಟ್ಟಾಗಿ ಸಾವು ಸಂಭವಿಸುತ್ತದೆ. ತಲೆಗೆ ಹಾಕುವ ಒಂದು ಶಿರಸ್ತ್ರಾಣ (ಹೆಲ್ಮೆಟ್)..... ನಮ್ಮ ಜೀವವನ್ನು ಉಳಿಸುತ್ತದೆ ಎಂಬುದನ್ನು ಮರೆಯುವ ಬೈಕ್ ಸವಾರರು ತಮ್ಮ ಪ್ರಾಣದ ಜೊತೆ ಜೊತೆಗೆ ತಮ್ಮ ಕುಟುಂಬದೆಡೆಗಿನ ತಮ್ಮ ಜವಾಬ್ದಾರಿಯನ್ನು ಕೂಡ ಮರೆತುಬಿಡುತ್ತಾರೆ.

ಇನ್ನು ಕಾರುಗಳು ಬಸ್ಸುಗಳು ಸುರಕ್ಷತಾ ನಿಯಮಗಳನ್ನು ಪಾಲಿಸದೆ ಹೋದಾಗ ದುರ್ಘಟನೆಗಳು ಸಂಭವಿಸುತ್ತವೆ. ಸಮಯಕ್ಕೆ ಸರಿಯಾಗಿ ವಾಹನಗಳನ್ನು ಸರ್ವಿಸ್ ಮಾಡಿಸುವುದು ಕೂಡ ಅಷ್ಟೇ ಅವಶ್ಯಕ. ವಾಹನಗಳ ಬ್ರೇಕ್, ಕ್ಲಚ್, ಇಂಜಿನ್ ಗಳ ಸಕ್ಷಮ ಕಾರ್ಯ ನಿರ್ವಹಣೆಗೆ ಅಗತ್ಯವಾಗಿ ಸರ್ವಿಸ್ ಮಾಡಿಸಲೇಬೇಕು.ದುಬಾರಿ ಎಂಬ ಭಾವದಿಂದ ಸರ್ವಿಸ್ ಮಾಡಿಸುವುದನ್ನು ಮುಂದೂಡುವುದರಿಂದ ಗಂಭೀರ ಪರಿಣಾಮಗಳನ್ನು ಎದುರಿಸಬೇಕಾಗಬಹುದು. ಆದ್ದರಿಂದ ವಾಹನಗಳನ್ನು ಹೊಂದಿರುವವರು 'ಇನ್ನೂ ಕೆಲ ದಿನಗಳು ನಡೆಯುತ್ತದೆ ಬಿಡು' ಎಂಬ ಭಾವವನ್ನು ತೊಡೆದು ಹಾಕಬೇಕು. ಇದು ಕೇವಲ ಅವರೊಬ್ಬರ ಜೀವನ್ಮರಣದ ಪ್ರಶ್ನೆಯಲ್ಲ... ಆ ಗಾಡಿಯಲ್ಲಿ ಕುಳಿತವರೆಲ್ಲರ ಪ್ರಾಣಗಳು, ಅಗಾಡಿಗೆ ಎದುರಾಗಿ ಬರುವವರ ಪ್ರಾಣಗಳು ಕೂಡ ಸುರಕ್ಷಿತವಾಗಿ ಇರಬೇಕಲ್ಲವೇ??

ಇನ್ನು ದೊಡ್ಡ ದೊಡ್ಡ ಲಾರಿಗಳು, ಕ್ಯಾಂಟರ್ಗಳು ಯಮಸ್ವರೂಪಿ ವೇಗದಿಂದ ಚಲಿಸುತ್ತಿರುತ್ತವೆ. ರಸ್ತೆಯೇ ತಮ್ಮದು ಎಂಬ ಭಾವದಿಂದ ಅವುಗಳನ್ನು ಚಲಾಯಿಸುವವರು ಮುಂದುವರೆಯುತ್ತಾರೆ ಎಂಬುದು ನಿಜವಾಗಿಯೂ ಆತಂಕಕ್ಕೆ ಈಡು ಮಾಡುವ ವಿಷಯ.


ಇನ್ನು ಕೆಲ ಭಾರಿ ವಾಹನಗಳಲ್ಲಿ ಸರಕಾರದ ನಿಯಮಾವಳಿಗಳನ್ನು ಪರಿಗಣನೆಗೆ ತೆಗೆದುಕೊಳ್ಳದೆ ಅಗತ್ಯಕ್ಕಿಂತಲೂ ಹೆಚ್ಚಿನ ತೂಕದ ವಸ್ತುಗಳನ್ನು ಹೇರಿಕೊಂಡು ಹೋಗುವಾಗ ಅವುಗಳ ಭಾರ ತಡೆಯದೆ ವಾಹನಗಳ ಟೈರು ಟ್ಯೂಬ್ಗಳು ಜೋರಾದ ಸ್ಫೋಟದೊಂದಿಗೆ ಸಿಡಿದು ಅಪಘಾತಗಳಿಗೆ ಕಾರಣವಾಗುತ್ತದೆ. ಇದರಿಂದ ಭಾರಿ ಪ್ರಮಾಣದ ಜೀವಹಾನಿ, ವಾಹನಕ್ಕೂ ಹಾನಿಯಾಗುತ್ತದೆ. ಅಪಘಾತದ ಪ್ರಯುಕ್ತ ಪೊಲೀಸು ಇಲಾಖೆ,ಸಾರಿಗೆ ಕಚೇರಿಗಳಿಗೆ ಎಡತಾಕುವ ಪ್ರಸಂಗಗಳು ಬರುತ್ತವೆ.

ಇನ್ನೂ ಹಲವು ವಾಹನಗಳಲ್ಲಿ, ಕೆಲವೊಮ್ಮೆ ದ್ವಿಚಕ್ರ ವಾಹನಗಳಲ್ಲಿ ಕೂಡ ವಾಹನದ ಗಾತ್ರ ಮೀರಿದ ಕಬ್ಬಿಣದ ಸಾಮಗ್ರಿಗಳನ್ನು, ಸಿಮೆಂಟ್ ಕಂಬಗಳನ್ನು ಹೇರಿಕೊಂಡು ಹೋಗುತ್ತಿರುತ್ತಾರೆ... ಅಂತಹ ಸಂದರ್ಭಗಳಲ್ಲಿ ಆಕಸ್ಮಿಕವಾಗಿ ಬ್ರೇಕ್ ಹಾಕಿದಾಗ ಹಿಂದಿನ ವಾಹನಗಳಿಗೆ ಅರಿವಾಗುವ ಮುನ್ನವೇ ಅವರು ಈ ವಾಹನಗಳಿಗೆ ಡಿಕ್ಕಿ ಹೊಡೆದು ಅನಾಹುತಗಳಿಗೆಡೆಯಾಗುತ್ತದೆ. ಕೊಂಚ ಮಾತ್ರದ ಅಜಾಗರೂಕತೆ ಸಾಕಷ್ಟು ಸಾವು ನೋವುಗಳಿಗೆ ಕಾರಣವಾಗುತ್ತದೆ.

ಮಧ್ಯಪಾನ ಮಾಡಿ ವಾಹನ ಚಲಾಯಿಸುವುದು, ಮೊಬೈಲ್ ಫೋನ್ನಲ್ಲಿ ಮಾತನಾಡುತ್ತಾ ವಾಹನ ಚಲಾಯಿಸುವುದು, ಮೆಸೇಜ್ ಮಾಡಲು ಪ್ರಯತ್ನಿಸುವುದು, ಅಸುರಕ್ಷಿತ ಮಾದರಿಯಲ್ಲಿ ಓವರ್ ಟೇಕ್ ಮಾಡಲು ಪ್ರಯತ್ನಿಸುವುದು ಅಪಘಾತ ಹೆಚ್ಚಳಕ್ಕೆ ಕಾರಣವಾಗುತ್ತದೆ.










**ವೀಣಾ ಹೇಮಂತಗೌಡ ಪಾಟೀಲ್, ಮುಂಡರಗಿ, ಗದಗ**

ಇನ್ನೂ ಹಲವಾರು ಬಾರಿ ಪಾದಚಾರಿ ರಸ್ತೆಯನ್ನು ಬಳಸದೆ, ಟ್ರಾಫಿಕ್ ನಿಯಮಾವಳಿಗಳನ್ನು ಉಲ್ಲಂಘಿಸಿ ರಸ್ತೆ ದಾಟುವ ಸಮಯದಲ್ಲಿ ಅಪಘಾತಗಳು ಸಂಭವಿಸುತ್ತವೆ. ಫೋನ್ನಲ್ಲಿ ಮಾತನಾಡುತ್ತಲೋ ಮೆಸೇಜ್ ಮಾಡುತ್ತಲೋ ರಸ್ತೆಗಳನ್ನು ದಾಟುವ ಜನ ತಮ್ಮ ಪ್ರಾಣದ ಜೊತೆ ಜೊತೆಗೆ ಉಳಿದವರ ಪ್ರಾಣಗಳನ್ನು ಕೂಡ ಪಣಕ್ಕ ಇಡುತ್ತಾರೆ.

ಮೇಲ್ಕಂಡ ಎಲ್ಲ ವಿಷಯಗಳನ್ನು ಮನಗಂಡು ನಮ್ಮ ಸರ್ಕಾರವು ರಸ್ತೆ ಸುರಕ್ಷತಾ ಅಧಿಸೂಚನೆ 1988ರ ಅಡಿಯಲ್ಲಿ ಕೆಲ ನಿಯಮಗಳನ್ನು ಘೋಷಿಸಿದೆ. 1989 ರಲ್ಲಿ ಸಾರಿಗೆ ಇಲಾಖೆಗೆ ಹಲವಾರು ನಿಯಮಗಳನ್ನು ಒಳಗೊಂಡ ಸಾರಿಗೆ ಮೋಟಾರ್ ವಾಹನ ಕಾಯ್ದೆಯನ್ನು ಜಾರಿಗೆ ತಂದಿದೆ. ತನ್ಮೂಲಕ ರಸ್ತೆ ಸುರಕ್ಷಾ ನಿಯಮಾವಳಿಗಳನ್ನು ಕಡ್ಡಾಯವಾಗಿ ಪಾಲಿಸಲು ಆದೇಶ ನೀಡಿದೆ. ನಾವು ನೀವೆಲ್ಲರೂ ಸುರಕ್ಷತೆಯ ನಿಯಮಾವಳಿಗಳನ್ನು ಪಾಲಿಸೋಣ. ಎಂತಹದೇ ಸಂದರ್ಭದಲ್ಲಿ ತಾಳ್ಮೆಯಿಂದ ವರ್ತಿಸೋಣ. ಅಪಘಾತದ ಸನ್ನಿವೇಶದಲ್ಲಿ ಸರ್ಕಾರಕ್ಕೆ ಮತ್ತು ವ್ಯವಸ್ಥೆಗೆ ನೀವೊಂದು ಸಂಖ್ಯೆ ಅಷ್ಟೇ ಆದರೆ ನಿಮ್ಮ ಮನೆಗೆ ನೀವೇ ಸರ್ವಸ್ವ...

ಆದ್ದರಿಂದ ಅನವಶ್ಯಕ ಅವಸರ ಅಪಘಾತಕ್ಕೆ ಕಾರಣ ಎಂಬ ಸತ್ಯವನ್ನು ಅರಿತು ಜಾಗರೂಕರಾಗಿ ವರ್ತಿಸಿ.... ನಿಮ್ಮ ಬರವಿಗಾಗಿ ಮನೆಯಲ್ಲಿ ಕಾಯುತ್ತಿರುತ್ತಾರೆ ಎಂಬುದನ್ನು ಮರೆಯದಿರಿ.

### ಈ ಆದೇಶಗಳ ಪ್ರಕಾರ


- ರಸ್ತೆಯ ಎಡ ಭಾಗದಲ್ಲಿ ಮಾತ್ರ ಸಂಚರಿಸಬೇಕು. ಎದುರಿಗೆ ಬರುತ್ತಿರುವವರು ಕೂಡ ರಸ್ತೆಯ ಎಡ ಭಾಗದಲ್ಲಿ ಸಂಚರಿಸಬೇಕು.
- ಪಾದಚಾರಿ ಮಾರ್ಗದಲ್ಲಿ ಪಾದಚಾರಿಗಳಿಗೆ ಮಾತ್ರ ಅವಕಾಶ.
- ಸಿಗ್ನಲ್ಗಳಲ್ಲಿ ಬರುವ ಕೆಂಪು ಹಳದಿ ಮತ್ತು ಹಸಿರು ಬಣ್ಣಗಳ ಲೈಟ್ಗಳ ತೋರುವ ಸಂಜ್ಞೆ ವಿವರಗಳನ್ನು ಅರಿತು ಅದರಂತೆ ನಡೆದುಕೊಳ್ಳಬೇಕು.
- ತಿರುವುಗಳಲ್ಲಿ ಹೊರಳುವಾಗ ವಾಹನದಲ್ಲಿ ಇಂಡಿಕೇಟರ್ಗಳನ್ನು ಬಳಸಬೇಕು. ಇಲ್ಲದೆ ಹೋದರೆ ಕೈಗಳ ಮೂಲಕ ಸಂಜ್ಞೆ ಮಾಡಬೇಕು.
- ಮಧ್ಯಪಾನ ಮಾಡಿ ವಾಹನ ಚಲಾಯಿಸಬಾರದು.
- ದ್ವಿಚಕ್ರ ವಾಹನ ಸವಾರರು ಕಡ್ಡಾಯವಾಗಿ ಶಿರಸ್ತ್ರಾಣವನ್ನು ಬಳಸಬೇಕು. ಎರಡಕ್ಕಿಂತ ಹೆಚ್ಚು ಜನರು ದ್ವಿಚಕ್ರ ವಾಹನದಲ್ಲಿ ಸಂಚರಿಸಲೇಬಾರದು. ಅಂತರಾಷ್ಟ್ರೀಯ ಗುಣಮಟ್ಟವಿರುವ ಹೆಲ್ಮೆಟ್ ಗಳನ್ನು ಧರಿಸುವುದನ್ನು ಕಡ್ಡಾಯವಾಗಿ ಪಾಲಿಸಬೇಕು.
- ಪಾರ್ಕಿಂಗ್ ಮಾಡಲು ಅವಕಾಶ ಇಲ್ಲದೆಡೆ ವಾಹನಗಳನ್ನು ನಿಲ್ಲಿಸಬಾರದು.
- ಅನವಶ್ಯಕವಾಗಿ ಹಳದಿ ಬಣ್ಣದ ಗೆರೆಗಳನ್ನು ಮತ್ತು ಸ್ಟಾಪ್ ಲೈನ್ ಗಳನ್ನು ದಾಟಲು ಪ್ರಯತ್ನಿಸಬಾರದು.
- ಅನವಶ್ಯಕವಾಗಿ ಹಾರ್ನ್ ಬಳಸಬಾರದು. ಒಮ್ಮಿಂದೊಮ್ಮೆಲೆ ಬ್ರೇಕ್ ಹಾಕಬಾರದು. ಎರಡು ವಾಹನಗಳ ನಡುವೆ ಕನಿಷ್ಠ ಅಂತರವನ್ನು ಕಾಯ್ದುಕೊಳ್ಳಬೇಕು.
- ಪಾದಚಾರಿಗಳಿಗೆ, ವೃದ್ಧರಿಗೆ ಮಕ್ಕಳಿಗೆ ಮತ್ತು ಅಂಗವಿಕಲರಿಗೆ ನಿಗದಿಪಡಿಸಿರುವ ಪಾದಚಾರಿ ರಸ್ತೆ ದಾಟುವ ದಾರಿಗಳಲ್ಲಿ ಅವರಿಗೆ ಮೊದಲು ಅವಕಾಶ ಮಾಡಿಕೊಡಬೇಕು.





## ಕವಿ ಮನಸು

### ಕ್ಷಮೆ ದಯೆಯ ಏಸುಕ್ರಿಸ್ತ



ಬೆತಹಲಿಮ್ ಪುರದ ಪೂರ್ವಕೆ
ಅಪೂರ್ವ ನಕ್ಷತ್ರದ ಹೊಳಪು
ಜನರ ಪಾಪತನವ ಕಳೆಯಲು
ಧರ್ಮ ಪ್ರವಾದಿ ಏಸುಕ್ರಿಸ್ತ ಜನನ

ಪಿತ ಜೋಸೆಫ್ ಮಾತೆ ಮೇರಿ
ಉದರದಲಿ ಲೋಕೋದ್ಧಾರಕ ಜನನ
ಲೋಕ ಪಾಪಗಳ ಮುಕ್ತಿಗೆಂದು
ದೈವಾಂಶ ಸಂಭೂತ ಏಸುಕ್ರಿಸ್ತ ಜನನ

ಜೇಸಿಸ್ ಏಸುಕ್ರಿಸ್ತ ಲೋಕೋದ್ಧಾರಕರು
ಭವಿ ರೋಗಿ ದುಃಖಿತರ ಸೇವೆಗೈದರು
ಲೋಕಕೆ ಪ್ರೀತಿಕರುಣೆ ನ್ಯಾಯ ನೀತಿ
ಅರುಹಿದರು
ಅರಿಷ್ಡವರ್ಗ ಯಹೂದಿ ನಡೆಯನು
ತಡೆದರು

ದೇವ ಪಿತೃತ್ವ ಮಾನವ ಬ್ರಾತೃತ್ವ
ಬೋಧಿಸಿದರು
ಪಾಪ ಪಶ್ಚತ್ತಾಪಕೆ ಕಾರುಣ್ಯ ದೀಕ್ಷೆ
ನೀಡಿದರು
ಜಹೋವ ದೇವರಾರ್ಚನೆ ಪರಿಪರಿಯ
ಟೀಕಿಸಿದರು
ಜರ್ಸಲೆಮ್ ಯಹೂದಿ ಕೋಪಕೆ
ಈಡಾದರು

ಜರ್ಸಲೆಮ್ ಗೂಲೋಡಮೌಂಟಗೆ
ಎಳೆತಂದರು
ಶಿಲಭೆಗೇರಿಸುತ ಏಸು ಕಾಯಕೆ ಮೊಳೆಗಳ
ಜಡಿದರು
ಮಹಾತ್ಮ ಏಸು ಕೋಪ ತಾಪಗೊಳ್ಳದೆ
ಶಾಂತ ಚಿತ್ತದಿ
ಜೀವ ಹಿಂಸೆ ಪಾಪಿಗಳ ಕ್ಷಮಿಸೆಂದು
"ದೇವ"ಕೆ ಮೊರೆಗೊಂಡರು
ಕ್ಷಮೆ ದಮೆ ತ್ಯಾಗ ಬಲಿದಾನದಿ ಏಸುಕ್ರಿಸ್ತ
ಅಮರರಾದರು.

**– ಸೋ.ದಾ.ವಿರೂಪಾಕ್ಷ ಗೌಡ**
ಹೊಸಪೇಟೆ.

## ತುಂಗಭದ್ರಾ ನೀರಿನ ಮಟ್ಟ



| ಸೋಮವಾರ : 25-12-2023 | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1589.44ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 858 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 10.572 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |

| ಕಳೆದ ವರ್ಷ ಇದೇ ದಿನ | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1626.25 ಅಡಿ |
| ಒಳ ಹರಿವು | 922 ಕ್ಯುಸೆಕ್ |
| ಹೊರ ಹರಿವು | 8966 ಕ್ಯುಸೆಕ್ |
| ಸಾಮರ್ಥ್ಯ | 80.652 ಟಿಎಂಸಿ |

### ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
– ಜಾಹೀರಾತು ವ್ಯವಸ್ಥಾಪಕರು.

" ಗೀತಾ ಜಯಂತಿ" ಭಗವದ್ಗೀತೆ ಜಯಂತಿ

# ಆ ಶಕ್ತಿಯೇ ಭಗವಂತ...




ಬೃಹತ್ಸಾಮಾ ತಥಾ ಸಮ್ನಾಂಗ್, ಗಾಯತ್ರಿ ಛಂದ ಸಾಮಹಮ್. ಮಾಸಾನಾಂ ಮಾರ್ಗಶೀರ್ಷೋಽಹಮ್, ಋತುನಾಂಗ್ ಕುಸುಮಾಕರಃ"–(ಗೀತೆ, ವಿಭೂತಿಯೋಗ 35ನೇ ಶ್ಲೋಕ) ಭಗವಂತನೇ ತನ್ನ ವಿಭೂತಿಗಳನ್ನು ಅಂದರೆ, ತನ್ನ ಐಶ್ವರ್ಯ, ತಾನು ಎಲ್ಲೆಲ್ಲೆ ವ್ಯಾಪಿಸಿರುವೆ!! ಎಂದು ಹೇಳುವಾಗ, 'ಗಾಯನಕ್ಕೆ ಶ್ರೇಷ್ಠವಾದ ಶೃತಿಗಳಲ್ಲಿ ಬೃಹತ್ಸಾಮವೂ, ಛಂದಸ್ಸಿನಲ್ಲಿ :ಗಾಯತ್ರಿ ಛಂದಸ್ಸು' ತಾನಾಗಿದ್ದೇನೆ ಎಂದು ಹೇಳುತ್ತಾ, ಮಾಸಗಳಲ್ಲಿಯೇ "ಮಾರ್ಗಶೀರ್ಷ ಮಾಸ"ವು ತಾನೇ. ಮತ್ತು ಋತುಗಳಲ್ಲಿ 'ಕುಸುಮಾಕರಃ' ಅಂದರೆ, ಹಚ್ಚ ಹಸಿರನಿಂದ, ಹೂಗಳು ಅರಳಿ ನಿಂತಿರುವ ವಸಂತ ಋತುವೇ ತಾನಾಗಿದ್ದೇನೆ" ಎಂದೇ ಭಗವಂತನಾದ ಶ್ರೀ ಕೃಷ್ಣ, ಅರ್ಜುನನಿಗೆ ಮತ್ತು ಅರ್ಜುನನ ಪ್ರತಿರೂಪಿಗಳಾದ ನಮಗೆಲ್ಲಾ, ಹೆಜ್ಜೆ ಹೆಜ್ಜೆಗೂ ತನ್ನ ವ್ಯಾಪಿಯನ್ನು ತಿಳಿಸುತ್ತಾ, ತಿಳುವಳಿಕೆ ಮೂಡಿಸಿ, ಮನದಲ್ಲಿ ಮೂಡುವ ಗೊಂದಲಗಳನ್ನು ಪ್ರತಿ ಹಂತದಲ್ಲೂ ನಿವಾರಿಸುತ್ತಿದ್ದಾರೆ.

ಶ್ರೀ ಕೃಷ್ಣ ಹೇಳಿದ 'ಮಾರ್ಗಶೀರ ಮಾಸ'ವು, ಕಾರ್ತಿಕ ಮಾಸದ ನಂತರದಲ್ಲಿ, ಹೇಮಂತ ಋತುವಿನ ಆರಂಭವೇ ಮಾರ್ಗಶೀರ್ಷ ಮಾಸವಾಗಿರುವುದು. ಪ್ರಕೃತಿಯ ಬದಲಾವಣೆಯ ಕಾಲ. ದಿಡೀರನೇ ಆಗಿರುವ ಚಳಿಯ ವಾತಾವರಣ, ಅಲ್ಲಲ್ಲಿ ಮರ–ಗಿಡಗಳ ಬಣ್ಣವೂ ಬದಲಾಗಿರುವುದು, ಜೊತೆಗೆ ಇಬ್ಬನಿ ಬಿದ್ದಿರುವುದು, ಹೊಗೆ ಮಂಜು ಆವರಿಸಿರುವುದು ಪ್ರಕೃತಿಗೊಂದು ನವಭಾಷ್ಯೆಯನ್ನೇ ಬರೆದಿರುವುದು, ಕವಿ ಮನಸ್ಸುಗಳಿಗೆ ಪ್ರೇರಕವಾಗಿರುವುದು. ಈ ಸಮಯದ ಮುಂಜಾನೆಯ ಗಾಳಿ ಸೇವನೆ, ಆರೋಗ್ಯಕ್ಕೂ ಸಹ ಒಳ್ಳೆಯದು ಎಂಬುದು ಬಲ್ಲವರ ಅಭಿಪ್ರಾಯವಾಗಿದೆ.

ಮಾರ್ಗಶೀರ್ಷ ಮಾಸದಲ್ಲಿಯೇ ಬರುವ, ಶುಕ್ಲಪಕ್ಷದ ಏಕಾದಶ ದಿನ ಅಥವಾ ಏಕಾದಶಿಯಾದ "ಮೋಕ್ಷದಾ ಏಕಾದಶಿ"ಯಂದು, "ಗೀತಾ ಜಯಂತಿ"ಯಾಗಿ ಆಚರಿಸುವರು. ಮಾರ್ಗಶೀರ್ಷ ಮಾಸದಲ್ಲಿ, ಸೌರಮಾಸದ ಪ್ರಕಾರವಾಗಿ, ಧನುರ್ ರಾಶಿಯಲ್ಲಿ ಸೂರ್ಯ ಪ್ರವೇಶಿಸಿದಾಗ, ಧನುರ್ಮಾಸವು ಆರಂಭವಾಗಿರುವುದು. ಈ ಸಮಯದವು ದೇವತೆಗಳು ತಮ್ಮ ಪೂಜೆಯನ್ನು ಸಲ್ಲಿಸುವ ಕಾರಣ, ಬ್ರಾಹ್ಮಿ ಮುಹೂರ್ತದ ಪೂಜೆಗೆ ಮಹತ್ವದ ಸ್ಥಾನ. ಮಾರ್ಗಶೀರ / ಧನುರ್ಮಾಸ ಎಂದರೆ, ದಕ್ಷಿಣಾಯನ ಸಮಯದ ಅಂತಿಮ ಘಟ್ಟ ಮತ್ತು ಉತ್ತರಾಯಣ ಸಮಯದ ಆರಂಭದ ಸೂಚನೆಯ ಪರ್ವಕಾಲ, ಸಂಧಿಕಾಲವೇ ಆಗಿರುವುದು. ಆ ಸಮಯದಲ್ಲಿ ಭಗವಂತನ ಆರಾಧನೆಗೆ, ವೈಜ್ಞಾನಿಕವಾಗಿ, ಆರೋಗ್ಯಕ್ಕಾಗಿ, ಆಧ್ಯಾತ್ಮಿಕ ಸಾಧನೆಗೆ ಉತ್ತಮೋತ್ತಮ ಸಮಯ, ಎಂಬುದು ಅಭಿಪ್ರಾಯ. ಹಾಗಾಗಿಯೇ ಈ ಮಾರ್ಗಶೀರ್ಷ / ಧನುರ್ಮಾಸದಲ್ಲಿ ಮದುವೆಯಂತಹ ಸಮಾರಂಭಗಳು ನಡೆಯದೇ, ದೇವತಾ ಆರಾಧನೆಯು, ದತ್ತಾರಾಧನೆ, ಅಯ್ಯಪ್ಪ ಸ್ವಾಮಿಯ ಆಧ್ಯಾತ್ಮಿಕ ಆರಾಧನೆಗಳು, ಇನ್ನಿತರ ಆರಾಧನೆಗಳು ನಡೆದುಕೊಂಡು ಬಂದಿವೆ.

ಇಂತಹ ಪವಿತ್ರ ಮಾಸವಾದ, "ಮಾರ್ಗಶೀರ್ಷ ಮಾಸ"ವೇ ತಾನೆಂದು, ನಿಯಮಾಕ ಕೇಶವನಾದ ಶ್ರೀ ಕೃಷ್ಣ ಹೇಳಿದ್ದಾರೆ. ಪ್ರತಿಯೊಂದು ಮಾಸಕ್ಕೂ, ನಿಯಮಾಕ ದೇವತೆ ಇರುವಂತೆ, ಮಾರ್ಗಶೀರ್ಷ ಮಾಸದ ನಿಯಾಮಾಕ ದೇವರು, "ಕೇಶವ" ರೂಪಿಯಾದ ಭಗವಂತ.



ಈ ಮಾರ್ಗಶೀರ್ಷ ಮಾಸದ ಶುಕ್ಲಪಕ್ಷದ, ಏಕಾದಶಿಯಾದ, 'ಮೋಕ್ಷದಾ ಏಕಾದಶಿ'ಯನ್ನು, " ಗೀತಾ ಜಯಂತಿ"ಯಾಗಿ ಆಚರಿಸುವೆವು. ಅಂದು ಶ್ರೀ ಕೃಷ್ಣ ಪರಮಾತ್ಮನು, ತನ್ನವರೆಲ್ಲರನ್ನು ಯುದ್ಧ ಭೂಮಿಯಲ್ಲಿ ಕಂಡು, ಯುದ್ಧ ಮಾಡಲಾಗದೇ, ವಿಷಾದದಿಂದ ಇದ್ದ ಅರ್ಜುನನಿಗೆ, ತನ್ನ ಮಾತಿನ ಮೂಲಕ, 'ಗೀತೋಪದೇಶ' ಮಾಡಿದ ಪವಿತ್ರ ದಿನವಾಗಿದೆ. "ಗೀತಾ ಜಯಂತಿ"/ 'ಭಗವದ್ಗೀತಾ ಜಯಂತಿ" ಎಂದು ಕರೆಯುವರು.

ಭಗವದ್ಗೀತೆಯು, "ಮಹಾಭಾರತ" ಮಹಾಕಾವ್ಯದ, ಬೀಷ್ಮ ಪರ್ವದ ಒಂದು ಭಾಗವಾಗಿದ್ದು, ನಮ್ಮೆಲ್ಲರಿಗೂ ಪವಿತ್ರ ಗ್ರಂಥವಾಗಿದೆ.

ಗೀತೆಯ 18 ಅಧ್ಯಾಯಗಳಿಗೂ ಒಂದೊಂದು ಹೆಸರಿದ್ದು, ಅಧ್ಯಯನ ದೃಷ್ಟಿಯಿಂದ, ಆಯಾ ಅಧ್ಯಾಯವು ನಮಗೆ ತಿಳಿಸುವ ವಿಚಾರಧಾರೆಗಳ ಆಧಾರದ ಮೇಲೆ, 18 ಅಧ್ಯಾಯಗಳಲ್ಲಿ ಮೊದಲ 6 ಅಧ್ಯಾಯಗಳನ್ನು "ಕರ್ಮಯೋಗಗಳು" ಎಂದೂ, 7ರಿಂದ 12ರ ವರೆಗಿನ ಅಧ್ಯಾಯಗಳನ್ನು "ಜ್ಞಾನ ಯೋಗ" ಎಂದೂ, ಮತ್ತು 13ರಿಂದ 18ನೇ ವರೆಗಿನ ಅಧ್ಯಾಯನಗಳನ್ನು "ಭಕ್ತಿ ಯೋಗ" ಎಂದು ವಿಂಗಡನೆ ಮಾಡಲಾಗಿದೆ.

ಭಗವದ್ಗೀತೆಯು, ಕಲಿಯುವವರಿಗೆ 'ಕಾಮದೇನು ಕಲ್ಪವೃಕ್ಷ' ಎಂದೆನಿಸಿ, ಅಮೃತವನ್ನೇ ಉಣಿಸುವ "ಗೀತಾಮೃತ"ವಾಗಿದೆ.

ಮಹಾಭಾರತ, ರಾಮಾಯಣದ ಯುದ್ಧಭೂಮಿಗಳು, ಈಗಿನ ಯುದ್ಧಗಳಂತೆ ರಣರಂಗಗಳಲ್ಲ. ಆ ಯುದ್ಧಗಳು ಧರ್ಮಯುದ್ಧಗಳಾಗಿದ್ದವು. ಎರಡೂ ಸೈನ್ಯಕ್ಕೆ ಯುದ್ಧದ ನಂತರ, ಸಮಾನವಾಗಿ ಕಾಣುವಂತಹ ಸಮಾನ ಊಟಪಚಾರ, ಸಮಾನ ಚಿಕಿತ್ಸೆ ಒದಗಿಸುವ ಧರ್ಮ ಯುದ್ಧ, ಧರ್ಮ ಕ್ಷೇತ್ರಗಳಾಗಿದ್ದವು. ಜೊತೆಗೆ ಎದುರಾಳಿ ಜನ್ಮದಾರಭ್ಯ ಅಂಧನಾಗಿಯೇ ಇದ್ದ, ಧೃತರಾಷ್ಟ್ರನಿಗೂ ಸಹ, "ಆ ಸಮಯದಲ್ಲಿ ಯುದ್ಧ ವೀಕ್ಷಿಸಲು, ಕಂಗಳನ್ನು ದಯಪಾಲಿಸುತ್ತೇನೆ" ಎಂದರೂ ಸಹ, ಆ ಕಂಗಳನ್ನು ನಿರಾಕರಿಸಿದ್ದರಿಂದ, ಯುದ್ಧದ ಬಗೆಗೆ ಹೇಳಲು ಸಂಜಯನಿಗೆ ವಿಶೇಷ ಚಕ್ಷುಗಳನ್ನು ದಯಪಾಲಿಸಿದ್ದ ಶ್ರೀಕೃಷ್ಣ ಪರಮಾತ್ಮ. ಇಂತಹ ಎಲ್ಲಾ ಧರ್ಮಗಳ ಪಾಲನೆ ಇದ್ದರಿಂದಲೇ ಅದು ಯುದ್ಧಭೂಮಿಯಲ್ಲ, ಧರ್ಮಕ್ಷೇತ್ರವಾಗಿತ್ತು. ಆದ್ದರಿಂದಲೇ, ಗೀತೆಯ ಮೊದಲ ಶ್ಲೋಕವೇ, "ಧರ್ಮಕ್ಷೇತ್ರೇ ಕುರುಕ್ಷೇತ್ರೆ, ಸಮಾವೇತಾ ಯುಯುತ್ಸವಃ " ಎಂದಿರುವುದು. ಗೀತೆಯು ಕೇವಲ, ಮನುಜನಿಗೆ ತಾನು ನಿರ್ವಹಿಸಲೇ ಬೇಕಾದ ಕರ್ಮದ ಬಗೆಗಷ್ಟೇ ಅಲ್ಲ ಹೇಳಿರುವುದು. ಜ್ಞಾನ ಎಂಬುದು ಮನುಜನಿಗೆ ಎಷ್ಟು ಅವಶ್ಯಕ & ಎಷ್ಟು ಅನಿವಾರ್ಯ? ಎಂದು ತಿಳಿಸುತ್ತಾ," ನಹಿ ಜ್ಞಾನೇನ ಸದೃಶ್ಯಂ, ಪವಿತ್ರ ಮಿಹ ವಿದ್ಯತೆ"(ಗೀತೆ 4.38) ಎಂದು ಜ್ಞಾನದ ಮಹತ್ವವನ್ನು ಶ್ರೀ ಕೃಷ್ಣ ತಿಳಿಸಿದ್ದಾರೆ. ಈಗ ಈ ಶ್ಲೋಕವು ಪ್ರತಿ ಶಾಲೆಯ ಫಲಕದಲ್ಲೂ ಇದೆ. (ನಮ್ಮ ಪ್ರೈಮರಿ ಶಾಲೆಯಲ್ಲಿಯೂ ಇದೆ.) ಜ್ಞಾನ, ವಿದ್ಯೆ ಎಂದರೆ ವಿಶೇಷವಾದ ಜ್ಞಾನ. ಅದು ನಮ್ಮನ್ನು ನಾವು ಅರಿತುಕೊಳ್ಳಲು ಇರುವ ಅರಿವು. ಜೀವನದಲ್ಲಿ ಹೇಗಿರಬೇಕು?,ದೇಹ ಪ್ರಕೃತಿಗನುಗುಣವಾಗಿ ಯಾವ ರೀತಿಯ ಕೆಲಸಗಳನ್ನು ಮಾಡುವುದು? ಯಾವ ರೀತಿಯಲ್ಲಿ ಊಟ ಮಾಡಬೇಕು, ಸಾತ್ವಿಕ, ರಾಜಸಿ, ತಾಮಸಿ ಊಟದ ಬಗೆ ಹೇಗಿರುವುದು? ಎಂಬುದನ್ನು, ಗೀತೋಪದೇಶದ ಮೂಲಕ, ಶ್ರೀ ಕೃಷ್ಣ ನಮಗೆ ತಿಳಿಸಿಕೊಡುವನು.

ಆತ್ಮದ ಬಗೆಗೆ ಹೇಳುತ್ತಾ, ಪ್ರತಿಯೊಬ್ಬರೊಳಗೆ, ಚರಾಚರ ವಸ್ತುವಿನಲ್ಲೂ ಭಗವಂತನಿದ್ದಾನೆ. ನಮ್ಮ ಯೋಚನಾ ಲಹರಿಗೆಲ್ಲಾ ಅವನೇ ಕಾರಣ, ಎಂದು ಹೇಳುತ್ತಾ ಜನನ–ಮರಣ ಚಕ್ರದ ಆಚೆಗಿರುವ, ಮುಕ್ತವಾಗಿರುವ ಆತ್ಮದ ಬಗೆಗೆ , ಶ್ರೀ ಕೃಷ್ಣ, " ನೈನಂ ಛಿಂದಂತಿ ಶಸ್ತ್ರಾಣಿ, ನೈನಂ ದಹತಿ ಪಾವಕಃ , ನ ಚೈನಂ ಕ್ಲೇದಯಂತ್ಯಾಪೋ, ನ ಶೋಷಯತಿ ಮಾರುತಃ" ಅಂದರೆ, ಯಾವುದನ್ನು ಶಸ್ತ್ರಗಳಿಂದ ತುಂಡರಿಸಲು, ಬೆಂಕಿಯಲ್ಲಿ ಸುಡಲು, ನೀರಲ್ಲಿ ನೆನೆಸಲು, ಗಾಳಿಯಲ್ಲಿ ಒಣಗಿಸಲು ಬರುವುದಿಲ್ಲವೋ ಅದೇ ಆತ್ಮ. ಇದನ್ನು ನಾವು ವಿಜ್ಞಾನದಲ್ಲಿ ಹೇಳುವುದಾದರೆ, "ಶಕ್ತಿಯನ್ನು (ಆತ್ಮವನ್ನು) ನಾವು ಸೃಷ್ಟಿಸಲು ಸಾಧ್ಯವಿಲ್ಲ. ನಾಶ ಪಡಿಸಲೂ ಸಾಧ್ಯವಿಲ್ಲ". ಅದೇ Enegry neigher be Created, nor be destroyed.

ಮುಂದುವರೆದು, ನಮ್ಮೊಳಗೆ ತ್ರೈ ಗುಣಗಳು, ಆ ಗುಣಗಳ ರೂಪುರೇಷೆಗಳು, ಸೃಷ್ಟಿಯ ರಹಸ್ಯ, ಚರಾಚರದಲ್ಲೂ ಭಗವದ್ ತತ್ವ ವ್ಯಾಪಿಸಿರುವುದು. ಅದೇ ನಾವೆಲ್ಲಾ ನಂಬಿರುವ 'ಕಾಣದ ಶಕ್ತಿ'. ಅದನ್ನೇ ಶ್ರೀ ಕೃಷ್ಣನು, "ಯಚ್ಚಾಪಿ ಸರ್ವಭೂತಾನಾಂ, ಬೀಜನ್ ತದಹಮರ್ಜುನ. ,ನ ತದಸ್ತಿ ವಿನಾ ಯತ್ಸ್ಯಾತ್ ಮಯಾ ಭೂತಾನ್ ಚರಾಚರಂ" ಎಂದು, ಸರ್ವ ಜೀವಿಗಳ ಉತ್ಪತ್ತಿಗೂ ತಾನೇ ಕಾರಣ. ಏಕೆಂದರೆ ತನ್ನ ರಹಿತವಾಗಿ ಯಾವ ಜೀವಿಯೂ ಇಲ್ಲ. ಎಂದು ತಿಳಿಸಿದ ಕೃಷ್ಣ, "ಪ್ರತಿ ಚರಾಚರ ಜೀವಿಯಲ್ಲೂ ಭಗವಂತನಿದ್ದಾನೆ" ಎಂಬ ಮಾತನ್ನು ನಮಗೆ ಸೂಚ್ಯವಾಗಿ ತಿಳಿಸಿದ್ದಾರೆ. ಆದ್ದರಿಂದಲೇ ಪ್ರತಿಯೊಬ್ಬರನ್ನೂ ಗೌರವಿಸಬೇಕೆಂಬ ಮಾತಿರುವುದು.

ಭಗವಂತ ತಾನು ವ್ಯಾಪಿಸಿರುವ ಪರಮ ಅಸ್ತಿತ್ವ, ವಿಭೂತಿಯಬಗೆಗೆ, ವಿಶ್ವರೂಪದ ಎಂದರೇನು? 'ಅಕ್ಷರ' ಎಂದರೇನು? ಅಕ್ಷರವು ಅಂದರೆ, ಎಂದೂ ಕ್ಷರವಾಗದ, ನಾಶವಾಗದ, ಅಪೌರುಷಯವಾದ "ಓಂಕಾರ" ಪ್ರಕೃತಿಯಲ್ಲಿ ಲೀನವಾಗಿ ವ್ಯಾಪಿಸಿದಂತೆ, ನಾವು ಮಾತನಾಡುವ ಪ್ರತಿಯೊಂದು ಮಾತು, ಅಕ್ಷರವು ಪ್ರಕೃತಿಯಲ್ಲಿ ಲೀನವಾಗಿ, ಮತ್ತೇ ಮುಂದೊಂದು ದಿನ, ನಮಗೆ ಅದು ಯಾವುದೋ ಮೂಲಕ ಕೇಳಲ್ಪಡುವುದು, ಎಂಬ ರಹಸ್ಯಗಳನ್ನು, ಗೀತೆಯ ಮೂಲಕ ಶ್ರೀಕೃಷ್ಣ ನಮಗೆ, ಅರ್ಜುನೋಪಾದಿಯಲ್ಲಿ ನಮಗೆ ತಿಳಿಸುವನು. ಬ್ರಹ್ಮಾಂಡದ ಸೃಷ್ಟಿಗೆ ಕಾರಣವಾದ ಅವ್ಯಕ್ತ ಶಕ್ತಿ, ಆ ಶಕ್ತಿ ಯಾರು? ಮನದ ಗೊಂದಲಗಳನ್ನು ನಿವಾರಿಸುವ ಮಾರ್ಗಗಳು, ವಿಷಾದದಲ್ಲಿರುವಾಗ ಅದರಿಂದ ಹೇಗೆ ಹೊರ ಬರುವುದು? ಕರ್ಮಗಳೆಂದರೇನು? ಎಂಬುದನ್ನು ಶ್ರೀ ಕೃಷ್ಣನು ಗೀತಾಸಾರದ ಮೂಲಕ ನಮಗೆಲ್ಲಾ ತಿಳಿಸುವರು.

ಕೃಷ್ಣ ಹೇಳುವುದು, "ಯದಾ ಯದಾ ಹಿ ಧರ್ಮಸ್ಯ, ಗ್ಲಾನಿರ್ದಭವತಿ ಭಾರತ. ಅಭ್ಯತ್ಥಾನಮ ಧರ್ಮಸ್ಯ, ತದಾತ್ಮಾನಮ್ ಸೃಜಾಮ್ಯಹಮ್"(ಗೀತೆ–4–7) ಮತ್ತು "ಪರಿತ್ರಾಯಣಾಯ ಸಾಧೂನಾಂ, ವಿನಾಶಯಾ ಚ ದುಷ್ಕೃತಾಮ್, ಧರ್ಮ ಸಂಸ್ಥಾಪನಾರ್ಥ ಸಂಭವಾಮಿ ಯುಗೇ ಯುಗೇ"(ಗೀತೆ4–8) ಯಾವಾಗ ಧರ್ಮದ ಉಳಿವಿನ ಪ್ರಶ್ನೆ ಬರುವುದೋ, ಧರ್ಮಕ್ಕೆ ಸಂಕಟ ಬರುವುದೋ, ಆಗ ತಾನು ಯಾವುದೋ ರೂಪದಲ್ಲಿ ಬಂದು ಕಾಪಾಡುತ್ತೇನೆ. ಮತ್ತು ಒಳ್ಳೆಯವರಿಗೆ ಕಷ್ಟ ಬಂದಾಗ, ದುಷ್ಟರನ್ನು ಸಂಹರಿಸಲು, ಬುದ್ಧಿ ಕಲಿಸಲು ಅವತರಿಸಿಯೇ ತಾನು ಯಾವ ರೂಪದಲ್ಲಾದರೂ ಅವತರಿಸುವೆನು", ಎಂಬುದಾಗಿ ಹೇಳುವರು. ಹಾಗಾಗಿಯೇ ದಶಾವತಾರಗಳು, ದುರ್ಗಾವತಾರಗಳಾಗಿದ್ದು, ಅಲ್ಲಿ ಶಿಷ್ಟ ರಕ್ಷಣೆ, ದುಷ್ಟ ನಿಗ್ರಹಕ್ಕಾಗಿ. ಮತ್ತು ಒಳ್ಳೆಯವರಿಗೆ ಅನೇಕ ಕಷ್ಟಗಳು ಒದಗಿದಾಗ ಯಾರದೋ ಮೂಲಕವಾದರೂ ಸರಿ, ಆ ಸಮಯಕ್ಕೆ ಒದಗಿ, ಬಗೆಹರಿದಿರುವುದು ಗಮನಿಸಿರುತ್ತೇವೆ. ಅದಕ್ಕೆ ಕಾಣದ ಶಕ್ತಿ ಅನ್ನುವುದು. ಆ ಶಕ್ತಿಯೇ ಭಗವಂತ. ಅವನೇ ಶ್ರೀ ಕೃಷ್ಣ.

ಒಂದೊಂದು ಪದಕ್ಕೂ ಸಾವಿರಗಟ್ಟಲೇ ಅರ್ಥವನ್ನೇ ಸ್ಪುರಿಸುವ ಗೀತೆಯನ್ನು, ಪ್ರತಿಯೊಬ್ಬರೂ ಪ್ರತಿ ಬಾರಿಯೂ ಓದುವಾಗ, ನಮ್ಮ ಸಮಯ, ಮನಸ್ಥಿತಿಗೆ ತಕ್ಕುನಾಗಿ ವಿಭಿನ್ನ ಅರ್ಥೈಸುವಿಕೆಯೇ ಆಗಿ, ವಿಭಿನ್ನ ಅರ್ಥವೇ ನಮಗೆ ಅರಿವಾಗುವುದು. ಅದು ಗೀತೆಯನ್ನು ಓದುವಾಗ, ಗುರುಗಳ ಮೂಲಕ ಕೇಳಿಸಿಕೊಳ್ಳುವಾಗ, ಕಲಿಕೆಯಲ್ಲಿ ತೊಡಗಿದಾಗ, ಅಲ್ಲಿ ಅರ್ಜುನ ಇರದೇ, ಸ್ವತಃ ನಾವೇ ಅಲ್ಲಿದ್ದು, ಮನಸ್ಸಿನಲ್ಲಿ ಮೂಡಿರುವ ಅನೇಕ ಪ್ರಶ್ನೆಗಳಿಗೆ ಕೃಷ್ಣನ ಮೂಲಕ ಉತ್ತರ ಕಂಡುಕೊಳ್ಳುವ ಭಾವವೇ ಇರುವುದು ಸತ್ಯ. ಕೃಷ್ಣನಿಂದ ಅರ್ಜುನ, ಅರ್ಜುನನಿಂದ???? ಎಂಬ ಪ್ರಶ್ನೆ ಖಂಡಿತಾ ನಮಗೆ ಮೂಡುವುದು. ಹಾಗಾಗಿಯೇ ಇದಕ್ಕೆ ಗುರುಪರಂಪರೆ ಎಂಬ ಹೆಸರು. 4ನೇ ಅಧ್ಯಾಯದ 1ನೇ ಶ್ಲೋಕದಲ್ಲಿ ಭಗವಂತನೇ ಹೇಳಿದಂತೆ, "ಇಮಂ ವಿವಸ್ವತೇ ಯೋಗಂ, ಪ್ರೋಕ್ತವಾನಹ ಮವ್ಯಯಮ್. ವಿವಸ್ವಾನ್ ಮನವೇ ಪ್ರಾಣ, ಮನು ರಿಕ್ಷ್ವಾಕವೇ ಬ್ರವೀತ್" ಎನ್ನುವಂತೆ, ಈ ಯೋಗವಿಜ್ಞಾನವನ್ನು ವಿವಸ್ವಾನ್ ಅಂದರೆ ಸೂರ್ಯನಿಗೆ ಮೊದಲು ನಾನು, (ಅಂದರೆ ಭಗವಂತ) ಹೇಳಿದೆ. ಸೂರ್ಯನು ತನ್ನ ಮಗನಾದ ಮನುಕುಲದ ಮೂಲ ಪುರುಷನಾದ ಮನುವಿಗೆ ಹೇಳಿದರೆ, ಮನುವು ಸೂರ್ಯವಂಶದ ಮೊದಲ ದೊರೆಯಾದ ಇಕ್ವಾಕು ದೊರೆಗೆ ಹೇಳಿದರು, ಎಂಬುದು. 'ಅಕ್ಷರ'ರೂಪವಾಗಿದ್ದು ಭಗವಂತನ ಮೂಲಕ, ಈ ದೊರೆಗಳಿಂದ ಬೆಳೆದು, ಅದನ್ನು ಹೇಳುವ ಪರಂಪರೆಯಾಯಿತು. ಈ ರೀತಿಯಾಗಿ, ಕೃಷ್ಣ ತನ್ನ ಆತ್ಮಸಖ, ಪ್ರಿಯ ಸಖನಾಗಿದ್ದ ಧನಂಜಯನಿಗೆ, ಅನೇಕ ಜ್ಞಾನದ ಅರಿವು, ಕರ್ಮದ ಫಲ, ತನ್ನ ವ್ಯಾಪ್ತತೆಯನ್ನು ತಿಳಿಸಿ, "ಕರ್ಮಣ್ಯೇ ವಾಧಿಕಾರಸ್ತೇ, ಮಾ ಫಲೇಸು ಕದಾಚನ. ಮಾ ಫಲ ಕರ್ಮ ಹೇತುರ್ಭೂ, ಮಾತೇ ಸಂಗೋಸ್ತ್ವ ಕರ್ಮಣಿ", ಎಂದು ತಿಳಿಸಿ, ಕರ್ಮಕ್ಕೆ ತಕ್ಕ ಫಲಗಳನ್ನು ನಾವು ಪಡೆದೇ ಪಡೆಯುವೆವು. ಅವುಗಳ ಕರ್ಮಫಲದ ಬಗೆಗೆ ಯೋಚಿಸದೇ, ಕಾರ್ಯ ನಿರ್ವಹಿಸು. ಹಾಗಂತ ಫಲಗಳಿಗೆ ಹೆದರಿ, ಕರ್ಮ ಮಾಡದಂತಿರಬಾರದು. ಇಲ್ಲಿ ಕರ್ಮ ಎಂದರೆ, ಪೂರ್ವಾರ್ಜಿತ ಕರ್ಮ ಫಲವಲ್ಲಷ್ಟೇ. ನಮ್ಮ ಸ್ವಾಭಾವದಿಂದ ನಾವು ಮಾಡುತ್ತಿರುವ, ನಡೆಸಿಕೊಂಡು ಬಂದ ವೃತ್ತಿ, ಕೆಲಸ.

ಆದ್ದರಿಂದಲೇ, "ಯತ್ರ ಯೋಗೇಶ್ವರೋ ಕೃಷ್ಣ, ಯತ್ರ ಪಾರ್ಥೋ ಧನುರ್ಧರಃ. ತತ್ರ ಶ್ರೀ ವಿಜಯೋರ್ಭೂತಿ, ಧ್ರುವಾ ನೀತಿರ್ಮತಿರ್ಮಮ" ಎಂದು ಹೇಳಿದ್ದಾರೆ. ಕೃಷ್ಣನಂತಹ ಬಂಧು ಜೊತೆಗಿದ್ದರೆ, ಪಾರ್ಥ & ಕೃಷ್ಣ ಜೊತೆಗಿದ್ದರೆ ಸದಾ ಯಶಸ್ಸು ಇರುವುದು. ಅಲ್ಲಿ ವಿಜಯ, ಧ್ರುವ ಅಂದರೆ ಪ್ರಸಿದ್ಧತೆ, ನೀತಿ,ಮತಿ ಇರುವುದು. ಅವುಗಳ ರೂಪದಲ್ಲಿ ಭಗವದ್ರೂಪಿ ಕೃಷ್ಣ ನೆಲೆಸಿರುವನು.

ನಿಜ ಅಲ್ಲವೇ!! ಯೋಗಕಾರಕ ಯೋಗೇಶ್ವರನಾದ ಕೃಷ್ಣನಂತಹ ಗುರು, ಸಖ, ಬಂಧು ನಮ್ಮ ಜೊತೆ ಇದ್ದರೆ, ಅರ್ಜುನನಂತಹ ಮನಸ್ಥಿತಿಯ ನಮಗೆ ಪರಿಹಾರಗಳು, ಸಮಾಧಾನ ದೊರಕುವುದು. ಯಾವುದೇ ಹಿಂಜರಿಕೆಯಿಲ್ಲದೇ ಕರ್ಮಗಳನ್ನು ಮಾಡಲು ಸಹಾಯಕವಾಗುವದು. ಇವರಿಬ್ಬರು ಇದ್ದಲ್ಲಿ ವಿಜಯ ಖಂಡಿತಾ ದೊರಕುವುದು.

ಆದ್ದರಿಂದಲೇ, "ಸರ್ವ ಧರ್ಮಾನ್ ಪರಿತ್ಯಜ್ಯ, ಮಾಮೇಕಂ ಶರಣಂ ವ್ರಜ. ಅಹಂ ತ್ವಾ ಸರ್ವ ಪಾಪೇಭ್ಯೋ ಮೋಕ್ಷ ಹಿ ಸ್ಯಾಮಿ ಮಾ ಶುಚಃ" ಎಂದು ಹೇಳಿ, ಶರಣಾಗತ, ಧನ್ಯತಾ ಭಾವದಿಂದ ನಿನ್ನ ಕಾರ್ಯ ನೀನು ನಿರ್ವಹಿಸಿ, ನನಗೆ ಶರಣಾಗು, ಕರ್ಮಫಲಗಳ ಬಗೆಗೆ ಚಿಂತಿಸದೇ, ಕರ್ಮಗಳನ್ನು ನನಗೆ ಶರಣಾಗತ ಮಾಡು, ಸರ್ವ ಪಾಪಗಳಿಂದ ಮುಕ್ತಿ/ಮೋಕ್ಷವಾಗುವುದು, ಎಂಬುದಾಗಿದೆ. ಗೀತೆಯನ್ನು ಮೊದಲೇ ಹೇಳಿದಂತೆ, ಪ್ರತಿ ಬಾರಿ ಓದಿದಾಗಲೂ, ಪ್ರತಿಯೊಬ್ಬರಿಗೂ ವಿಭಿನ್ನ ದೃಷ್ಟಿಯ ಅರ್ಥವು ಬಂದು, ವಿಭಿನ್ನ ಅರಿವೇ ಗೋಚರವಾಗುವುದು. ಹೇಗೆ ಬದುಕಬೇಕು, ಹೇಗಿರಬೇಕು? ಎಂದು ತಿಳಿಸುವ, ಗೀತಾಮೃತವು ಪ್ರತಿಯೊಬ್ಬರಿಗೂ, ವಿಶೇಷವಾದ ವಿಭಿನ್ನ ಅರ್ಥವನ್ನೇ ನೀಡುವುದು.

ಶ್ರೀ ಕೃಷ್ಣಾರ್ಪಣಮಸ್ತು!!

**– ಲೀಲಾವತಿ ವಿಜಯಕುಮಾರ.**
ಹ.ಬೊ.ಹಳ್ಳಿ.



ಮೈಕ್ರೋ ನ್ಯೂಸ್

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಸ್ಥಳೀಯ ಸುದ್ದಿಗಳಿಗಾಗಿ ಭೇಟಿ ನೀಡಿ
www.hampitimes.com
epaper.hampitimes.com

## ಹೊಸಪೇಟೆಯಲ್ಲಿಂದು ಊರಮ್ಮ ದೇವಿ ಕಾರ್ತಿಕೋತ್ಸವ



**ಹಂಪಿ ಟೈಮ್ಸ್ ಹೊಸಪೇಟೆ**
ನಗರದ ಶ್ರೀ ಗ್ರಾಮ ದೇವತಾ ಊರಮ್ಮ ದೇವಿಯ ಮಹಾ ಕಾರ್ತಿಕೋತ್ಸವವು ಡಿ.26 ರಂದು ಮಂಗಳವಾರ ಹುಣ್ಣಿಮೆಯ ದಿವಸ ರಾತ್ರಿ 8–00 ಗಂಟೆಗೆ ಶ್ರೀದೇವಿಗೆ ಅಲಂಕಾರ ಮತ್ತು ದೀಪುತ್ಸವ ಕಾರ್ಯಕ್ರಮ ನೆರವೇರಿಸಲಾಗುವುದು. ಭಕ್ತಾದಿಗಳು ಶ್ರೀದೇವಿಗೆ ಫಲ ಪುಷ್ಪಗಳನ್ನು ಅರ್ಪಿಸಿ ದರ್ಶನ ಆಶೀರ್ವಾದ ಪಡೆದು ಪ್ರಸಾದ ಸ್ವೀಕರಿಸಬೇಕೆಂದು ಹೊಸಪೇಟೆ ಶ್ರೀ ಗ್ರಾಮ ದೇವತೆ ಊರಮ್ಮ ದೇವಸ್ಥಾನ ಜೀರ್ಣೋದ್ಧಾರ ಅಭಿವೃದ್ಧಿ ಸಮಿತಿ ಅಧ್ಯಕ್ಷರು ತಿಳಿಸಿದ್ದಾರೆ.

## ಇಂದು ಗ್ರಾಮ ದೇವತೆ ಕಾರ್ತಿಕೋತ್ಸವ



**ಹಂಪಿ ಟೈಮ್ಸ್ ಕೂಡ್ಲಿಗಿ:**
ಪಟ್ಟಣದ ಗ್ರಾಮ ದೇವತೆ ಊರಮ್ಮ ದೇವಿಯ ಕಾರ್ತಿಕವನ್ನು ಮಂಗಳವಾರ ಸಂಜೆ ಸಾವಿರಾರು ಭಕ್ತರ ಸಮ್ಮುಖದಲ್ಲಿ ಜರುಗಲಿದೆ ಎಂದು ದೈವದ ಪ್ರಮುಖರಾದ ಕೆ.ಎಚ್.ವೀರನಗೌಡ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಪ್ರತಿ ವರ್ಷದಂತೆ ಈ ವರ್ಷವು ಕಾರ್ತೀಕೋತ್ಸವದ ಅಂಗವಾಗಿ ಮಂಗಳವಾರ ಸಂಜೆ 7 ಗಂಟೆಗೆ ಗ್ರಾಮ ದೇವತೆ ಊರಮ್ಮ ದೇವಿಯ ದೇವಸ್ಥಾನದಲ್ಲಿ ಕಾರ್ತೀಕ ದೀಪ ಬೆಳಗಲಾಗುವುದು.ನಂತರ ಆವರಣದಲ್ಲಿ ಭಕ್ತರ ಅಭೀಷ್ಟದಂತೆ ಸಾವಿರಾರು ಹಣತೆಯಲ್ಲಿ ಕಾರ್ತೀಕ ದೀಪ ಬೆಳಗಲಾಗುತ್ತದೆ. ನಂತರ ಭಕ್ತರ ಆಶಯದಂತೆ ಬಾಣ,ಬಿರುಸುಗಳನ್ನು ಸಹ ಹಚ್ಚಲಾಗುವುದು ಎಂದು ತಿಳಿಸಿದರು. ಪಟ್ಟಣ ಹಾಗೂ ಸುತ್ತಲಿನ ಗ್ರಾಮದ ಸದ್ಭಕ್ತರು ಈ ಕಾರ್ಯಕ್ರಮದಲ್ಲಿ ಭಾಗಿಯಾಗಲು ತಿಳಿಸಿದರು. ಅದರಂತೆ ಐತಿಹಾಸ ಪ್ರಸಿದ್ಧ ಗ್ರಾಮ ದೇವತೆಯ ನೂತನ ದೇವಸ್ಥಾನ ಈಗಾಗಲೇ ಪಟ್ಟಣದ ಸರ್ವ ಭಕ್ತರ ದೇಣಿಗೆಯಿಂದ ಭವ್ಯ ದೇವಾಲಯದ ಕಾರ್ಯ ಪೂರ್ಣಗೊಳ್ಳುವ ಹಂತಕ್ಕೆ ಬಂದಿದ್ದು. ನೂತನ ದೇವಸ್ಥಾನ ಮುಂದಿನ ಮಾರ್ಚ್ ಅಂತ್ಯಕ್ಕೆ ಪೂರ್ಣಗೊಳ್ಳಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.ಭವ್ಯವಾದ ದೇವಸ್ಥಾನವನ್ನು ಲೋಕಾರ್ಪಣೆ ಮಾಡಿದ ನಂತರ, 2025 ಕ್ಕೆ ಭಕ್ತರ ಕೋರಿಕೆಯಂತೆ ಅದ್ದೂರಿ ಜಾತ್ರೆಯನ್ನು ಸಹ ಹಮ್ಮಿಕೊಳ್ಳಲು ತೀರ್ಮಾನಿಸಲಾಗಿದೆ ಎಂದು ತಿಳಿಸಿದರು. ಆದ್ದರಿಂದ ನೂತನ ದೇವಸ್ಥಾನ ಕಟ್ಟಡಕ್ಕೆ ದೇಣಿಗೆ ನೀಡುವ ಬಯಸುವ ಭಕ್ತರು ತಮ್ಮ ದೇಣಿಗೆಯನ್ನು ಶೀಘ್ರವಾಗಿ ನೀಡಿ ದೈವದವರ ಮೂಲಕ ರಸೀದಿಯನ್ನ ಕಡ್ಡಾಯವಾಗಿ ಪಡೆಯಬೇಕು ಎಂದು ತಿಳಿಸಿದರು.

# ಹನುಮ ಮಾಲಾಧಾರಿಗಳಿಂದ ಅಂಜನಾದ್ರಿಯ ದರ್ಶನ



**ಹಂಪಿ ಟೈಮ್ಸ್ ಕೊಪ್ಪಳ**
ಶ್ರೀ ಆಂಜನೇಯ ಸ್ವಾಮಿ ಜನ್ಮತಾಣವಾದ ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲೂಕಿನ ಅಂಜನಾದ್ರಿಯು ವರ್ಷಾಂತ್ಯದ ಡಿಸೆಂಬರ್ ಮಾಹೆಯಲ್ಲಿ ಮತ್ತೊಂದು ಇತಿಹಾಸ ದಾಖಲಿಸಿತು.

ಧಾರ್ಮಿಕ ದತ್ತಿ ಇಲಾಖೆ ಸೇರಿದಂತೆ ವಿವಿಧ ಇಲಾಖೆಗಳ ಸಹಯೋಗದೊಂದಿಗೆ ಜಿಲ್ಲಾಡಳಿತ ಆಯೋಜನೆ ಮಾಡಿದ್ದ ಈ ಬಾರಿಯ ಹನುಮಮಾಲಾ ವಿಸರ್ಜನೆ ಕಾರ್ಯಕ್ರಮದಲ್ಲಿನ ಹೊಸತನಕ್ಕೆ ಸಾರ್ವಜನಿಕರಿಂದ ಮೆಚ್ಚುಗೆ ವ್ಯಕ್ತವಾಯಿತು. ಹನುಮಮಾಲಾ ವಿಸರ್ಜನೆಯ ಮುನ್ನಾ ದಿನವಾದ ಡಿಸೆಂಬರ್ 23ರಂದು ಕಂಡು ಬಂದ ಹಬ್ಬದ ಸಂಭ್ರಮವು ಡಿಸೆಂಬರ್ 24ರಂದು ಸಹ ವಿಶೇಷವಾಗಿ ಕಂಡು ಬಂದು ಅದಕ್ಕೆ ಸಾವಿರಾರು ಸಂಖ್ಯೆಯ ಭಕ್ತರು ಸಾಕ್ಷಿಯಾದರು. ಡಿಸೆಂಬರ್ 24ರಂದು ಸಹ ಕಣ್ಣು ಹಾಯಿಸಿದೆಲ್ಲೆಡೆ ಕಾಣುತ್ತಿದ್ದ, ಇರುವೆ ಹರಿದಾಡುವಂತೆ ಅಲ್ಲಲ್ಲಿ ಸುತ್ತುತ್ತ ಶಾಂತಿ ಮತ್ತು ಶಿಸ್ತಿನಿಂದ ಹೆಜ್ಜೆ ಹಾಕಿದ ಹನುಮವ ಮಾಲಾಧಾರಿಗಳು ಅಕ್ಷರಶಃ ಹನುಮನ ಪ್ರತಿರೂಪದಂತೆ ಕಂಡು ಬಂದರು.

2023 ವರ್ಷದ ಮುಕ್ತಾಯಕ್ಕೆ ಬೆರಳೆಣಿಕೆಯ ಕೆಲವೇ ದಿನಗಳು ಬಾಕಿ ಇದ್ದು, ವರ್ಷದ ಕೊನೆಯ ತಿಂಗಳ ಡಿಸೆಂಬರ್‌ನಲ್ಲಿ ಆಯೋಜನೆಯಾಗಿದ್ದ 2023ರ ಹನುಮಮಾಲಾ ವಿಸರ್ಜನೆಯ ಕಾರ್ಯಕ್ರಮಕ್ಕಾಗಿ ಜಿಲ್ಲಾಡಳಿತವು ಈ ಬಾರಿ ಕೈಗೊಂಡ ಧ್ವನಿ ಬೆಳಕು, ಅಂಜನೇಯ ಸ್ವಾಮಿಯ ದರ್ಶನದ ನೇರ ಪ್ರಸಾರ ಸೇರಿದಂತೆ ಕೆಲವು ಹೊಸ ಹೊಸ ಪ್ರಯೋಗಗಳಿಗೆ ರಾಜ್ಯದ ಹಾಗೂ ದೇಶದ ನಾನಾ ಭಾಗದ ಲಕ್ಷಾಂತರ ಭಕ್ತರು ಪ್ರತ್ಯಕ್ಷ ಸಾಕ್ಷಿಯಾದರು.

ಜಿಲ್ಲಾಡಳಿತವು ಈ ಬಾರಿ ವಿವಿಧೆಡೆ ಶ್ರೀ ಆಂಜನೇಯ ಸ್ವಾಮಿ ದರ್ಶನದ ನೇರ ಪ್ರಸಾರಕ್ಕೆ ವ್ಯವಸ್ಥೆ ಮಾಡಿದ್ದರಿಂದ ಅಂಜನಾದ್ರಿಗೆ ಬಂದಿದ್ದ ಭಕ್ತರು ಬೆಟ್ಟದ ಕೆಳಗಡೆಯೇ ಆಂಜನೇಯ ಸ್ವಾಮಿಯ ದರ್ಶನ ಪಡೆದು ನಮಿಸಿದರು. ತಮ್ಮ ಹರಕೆಯ ಹೊರೆಯನ್ನು ಇಳಿಸಿದರು. ಆಂಜನೇಯ ದರ್ಶನದೊಂದಿಗೆ ಹೊಸ ಸಂಕಲ್ಪ ಮಾಡಿ ಹುಮ್ಮಸ್ಸಿನಿಂದ ತೆರಳಿದರು. ಶನಿವಾರ ಆಂಜನೇಯ ಸ್ವಾಮಿಯ ದಿನವಾಗಿದ್ದರಿಂದ ವಾಡಿಕೆಯಂತೆ ಡಿಸೆಂಬರ್ 23ರ ಸಂಜೆಯಿಂದಲೇ ಹೆಚ್ಚಿನ ಸಂಖ್ಯೆಯಲ್ಲಿ ಹನುಮ ಮಾಲಾಧಾರಿಗಳು ಸಾರ್ವಜನಿಕರು ಅಂಜನಾದ್ರಿಯತ್ತ ಆಗಮಿಸಿ ಆಂಜನೇಯನ ಸನ್ನಿಧಿಯಲ್ಲಿ ಅಲ್ಲಲ್ಲಿ ವಾಸ್ತವ್ಯ ಹೂಡಿದರು. ಭಾನುವಾರ ಬೆಳ್ಳಂಬೆಳಗ್ಗೆಯೇ ಸ್ನಾನ ಮಾಡಿ ಸೂರ್ಯೋದಯ ಮುನ್ನವೇ ಬೆಟ್ಟದತ್ತ ಸಾಲುಸಾಲಾಗಿ ಸಾಗಿ ಭಕ್ತಿ ಭಾವದಿಂದ ಜೈ ಹನುಮಾನ ಜೈ ಶ್ರೀರಾಮ ಎಂದು ಘೋಷಣೆ ಮೊಳಗಿಸುತ್ತ ಪಾದಗಟ್ಟೆ ಪಕ್ಕದ ಪಾಟುನಗಿಗಳ ಮೂಲಕ ಸಾಗುತ್ತಿದ್ದಾಗ ಆಂಜನೇಯ ಸ್ವಾಮಿ ದರ್ಶನ ಪಡೆಯಲು ನಾ ಮುಂದೆ ನೀ ಮುಂದೆ ಎನ್ನುವಂತೆ ಕೆಲವರು ಓಡುತ್ತ ಅತೀ ಎತ್ತರದ ಬೆಟ್ಟದ ಮೇಲೆ ಬರಬರನೇ ಏರಿದರು. ತಮ್ಮ ನೆಚ್ಚಿನ ದೇವರು ಆಂಜನೇಯ ಸ್ವಾಮಿ ದರ್ಶನ ಪಡೆದ ಬಳಿಕ ಹನುಮ ಮಾಲಾಧಾರಿಗಳು ಪುನೀತರಾಗಿ ಅವರ ಮೊಗದಲ್ಲಿ ಸಂತಸ ಕಾಣುತಿತ್ತು. ಬೆಟ್ಟದ ಮೇಲೆ ಕೆಲ ನಿಮಿಷಗಳ ಕಾಲ ವಿರಮಿಸಿ ಮತ್ತೆ ಪ್ರಸನ್ನಮಯ ಮುಖ ಹೊತ್ತು ಬೆಟ್ಟದಿಂದ ಸಾಲುಸಾಲಾಗಿ ಕೆಳಗೆ ಬರುತ್ತಿದ್ದಾಗ ದೂರದ ಚೆಂದದ ಗುಡ್ಡಗಳ ದೃಶ್ಯಾವಳಿಗಳನ್ನು, ಅಲ್ಲಲ್ಲಿ ಹಚ್ಚಹಸಿರಾಗಿ ಕಾಣುತ್ತಿದ್ದ ಭತ್ತದ ಗದ್ದೆಗಳನ್ನು ಮೊಬೈನಲ್ಲಿ ಸೆರೆ ಹಿಡಿಯುವ ದೃಶ್ಯಗಳು ಕಾಣಿಸಿದವು.

ಬೆಟ್ಟದಿಂದ ಕೆಳಗೆ ಇಳಿದ ಬಳಿಕ ಭಕ್ತರು ನೇರವಾಗಿ ಬೆಟ್ಟಕ್ಕೆ ಹೊಂದಿಕೊಂಡ ವೇಧಪಾಠ ಶಾಲೆಯತ್ತ ಸಾಗಿ ಅಲ್ಲಿ ವ್ಯವಸ್ಥೆ ಮಾಡಿದ್ದ ಪ್ರಸಾದವನ್ನು ಪಡೆದು ಬೆಟ್ಟದ ಅಲ್ಲಲ್ಲಿ ಕೆಲಹೊತ್ತು ಕುಳಿತು ವಿರಮಿಸಿ ಅಲ್ಲಿಂದ ತಿರುಗಿ ಮತ್ತೆ ತಮ್ಮ ತಮ್ಮ ಸ್ಥಳಕ್ಕೆ ಸಾಗುತ್ತಿದ್ದ ವೇಳೆಯಲ್ಲಿ ತಮ್ಮ ನೆಚ್ಚಿನ ಹನುಮದೇವರ ಮೂರ್ತಿಗಳನ್ನು ಖರೀದಿಸುವುದು, ಭಕ್ತಿ ಭಾವದ ಪ್ರತೀಕದ ನಾನಾ ಬಗೆಯ ಹಾರ–ದಾರಗಳೊಂದಿಗೆ ಸಾಗುತ್ತಿದ್ದ ದೃಶ್ಯಗಳು ಸಹ ಕಂಡು ಬಂದವು. ಬಹುತೇಕ ಭಕ್ತರು ಹೊತ್ತೇರುವ ಮೊದಲೇ ಶ್ರೀ ಆಂಜನೇಯ ಸ್ವಾಮಿಯ ದರ್ಶನ ಪಡೆದು ಅಂಜನಾದ್ರಿಯಿಂದ ನಿರ್ಗಮಿಸಿ ಅಂಜನಾದ್ರಿ ಸುತ್ತಲಿನ ವಿವಿಧ ದೇವಸ್ಥಾನಗಳ ದರ್ಶನಕ್ಕಾಗಿ ಲಗುಬಗೆಯಿಂದ ತೆರಳುತ್ತಿದ್ದ ದೃಶ್ಯಗಳು ಸಹ ಸಾಮಾನ್ಯವಾಗಿತ್ತು. ಅಂಜನಾದ್ರಿಯಲ್ಲಿ ಹನುಮ ದೇವರ ದರ್ಶನ ಪಡೆದ ಬಳಿಕ ಕೆಲವರು ಹತ್ತಿರದ ಹಂಪಿಯ ವಿರುಪಾಕ್ಷೇಶ್ವರ ಸ್ವಾಮಿಯ ದರ್ಶನಕ್ಕೆ ತೆರಳಿದರೆ ಇನ್ನು ಕೆಲವು ಭಕ್ತರು ಹತ್ತಿರದ ಹುಲಗಿಯ ಶ್ರೀ ಹುಲಿಗೆಮ್ಮ ದೇವಸ್ಥಾನ ಮತ್ತು ಕೊಪ್ಪಳ ಗವಿಸಿದ್ದೇಶ್ವರ ಮಠದತ್ತ ತೆರಳುತ್ತಿರುವುದು ಸಹ ಕಂಡು ಬಂದಿತು. ಇನ್ನು ಕೆಲವು ಭಕ್ತರು ಬೇರೆ ಬೇರೆ ದೇವಸ್ಥಾನಗಳತ್ತ ತೆರಳಿದರು. ಇನ್ನು ಕೆಲವು ಭಕ್ತರು ಹಂಪಿ, ತುಂಗಭದ್ರಾ ನದಿ ಸೇರಿದಂತೆ ಚೆಂದದ ವಿವಿಧ ಪ್ರವಾಸಿ ತಾಣಗಳ ವೀಕ್ಷಣೆಗೆ ತೆರಳಿದರು.

ನಾನಾ ಸೌಕರ್ಯ: ಅಂಜನಾದ್ರಿಗೆ ಸಾವಿರಾರು ಸಂಖ್ಯೆಯಲ್ಲಿ ಭಕ್ತರು ಬರುತ್ತಿದ್ದಾರೆಂದು ಪೂರ್ವ ನಿಯೋಜನೆಯೊಂದಿಗೆ ಜಿಲ್ಲಾಡಳಿತವು ಎಲ್ಲಾ ರೀತಿಯ ಮೂಲ ಸೌಕರ್ಯಗಳ ವ್ಯವಸ್ಥೆಯನ್ನು ಕಲ್ಪಿಸಿತ್ತು. ಕುಡಿಯುವ ನೀರು, ಸ್ನಾನಗೃಹಗಳು, ವಾಹನಗಳಿಗೆ ಪಾರ್ಕಿಂಗ್, ಪ್ರಸಾದ ವ್ಯವಸ್ಥೆ, ಸಾರಿಗೆ ವ್ಯವಸ್ಥೆ, ಸಹಾಯವಾಣಿ, ಅಗತ್ಯ ಸಂಖ್ಯೆಯಲ್ಲಿ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿ ನಿಯೋಜನೆ, ವಿವಿಧೆಡೆ ಕಂಟ್ರೋಲ್ ರೂಮ್ ಸೇರಿದಂತೆ ಸುತ್ತ ಎಲ್ಲ ಕಡೆಯೂ ಎಲ್ಲ ರೀತಿಯ ಮೂಲಭೂತ ಸೌಕರ್ಯ ಕಲ್ಪಿಸಲಾಗಿದ್ದರಿಂದ ಹನುಮ ಮಾಲಾಧಾರಿಗಳು ಸೇರಿದಂತೆ ಎಲ್ಲರಿಗೂ ಅನುಕೂಲವಾಯಿತು.


ಈ ಮೂಲಕ ಡಿಸೆಂಬರ್ 23 ಮತ್ತು ಡಿಸೆಂಬರ್ 24ರಂದು ಎರಡೂ ದಿನಗಳ ಕಾಲ ಆಯೋಜನೆಯಾಗಿದ್ದ ಹನುಮಮಾಲಾ ವಿಸರ್ಜನೆ ಕಾರ್ಯಕ್ರಮವು ಜನ ಮೆಚ್ಚುಗೆಯೊಂದಿಗೆ ಯಶಸ್ಸು ಕಂಡಿತು. ಹಿಂದುಳಿದ ವರ್ಗಗಳ ಕಲ್ಯಾಣ, ಕನ್ನಡ ಮತ್ತ ಸಂಸ್ಕೃತಿ ಇಲಾಖೆಯ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಶಿವರಾಜ ತಂಗಡಗಿ ಅವರು ಅಂಜನಾದ್ರಿಗೆ ಆಗಮಿಸಿ ಕಾರ್ಯಕ್ರಮದ ವ್ಯವಸ್ಥೆಯನ್ನು ಪರಿಶೀಲಿಸಿದರು. ಅತ್ಯಂತ ಅಚ್ಚುಕಟ್ಟಾಗಿ ನಡೆದ ವ್ಯವಸ್ಥೆಯನ್ನು ಕಂಡು ಮೆಚ್ಚುಗೆ ವ್ಯಕ್ತಪಡಿಸಿದರು. ಶಾಸಕರಾದ ಜನಾರ್ಧನ ರೆಡ್ಡಿ ಸೇರಿದಂತೆ ಹಲವಾರು ಜನಪ್ರತಿನಿಧಿಗಳು ಅಂಜನಾದ್ರಿಗೆ ಆಗಮಿಸಿ ಆಂಜನೇಯ ಸ್ವಾಮಿಯ ದರ್ಶನ ಪಡೆದರು. ಜಿಲ್ಲಾಧಿಕಾರಿಗಳಾದ ನಲಿನ್ ಅತುಲ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಯಶೋಧಾ ವಂಟಗೋಡಿ, ಉಪ ವಿಭಾಗಾಧಿಕಾರಿಗಳಾದ ಕ್ಯಾಪ್ಟನ್ ಮಹೇಶ ಮಾಲಗಿತ್ತಿ ಅವರ ನೇತೃತ್ವ ಮತ್ತು ಮಾರ್ಗದರ್ಶನದಲ್ಲಿ ತಹಸೀಲ್ದಾರರಾದ ವಿಶ್ವನಾಥ ಮುರುಡಿ, ಶೃತಿ, ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕರು, ಗಂಗಾವತಿಯ ಪೌರಾಯುಕ್ತರು ಸೇರಿದಂತೆ ಇನ್ನಿತರ ಇಲಾಖೆಗಳ ಅಧಿಕಾರಿಗಳು ಅಂಜನಾದ್ರಿಯಲ್ಲಿದ್ದು ಕಾರ್ಯಕ್ರಮದ ಮೇಲುಸ್ತುವಾರಿಯನ್ನು ಅಚ್ಚುಕಟ್ಟಾಗಿ ನಿಭಾಯಿಸಿದರು.








ಸೋಮವಾರ ರಾತ್ರಿ ಅಂಜನಾದ್ರಿ ದರ್ಶನಕ್ಕೆ ತೆರಳಿದ ಭಕ್ತರು ವಿದ್ಯುತ್ ಪೂರೈಕೆ ವ್ಯತ್ಯಯದಿಂದ ಸಮಸ್ಯೆಗೆ ಸಿಲುಕಿದರು. ವಾಹನಗಳ ಲೈಟಿಂಗ್‌ನಲ್ಲೆ ಭಕ್ತರು ಓಡಾಡಿದರು.





# ಗ್ಯಾರಂಟಿಗೆ ಖಜಾನೆ ಖಾಲಿ ಖಾಲಿ ದಿವಾಳಿಯತ್ತ ಸಾರಿಗೆ ಇಲಾಖೆ

## ಜಿಲ್ಲಾ ಬಿಜೆಪಿ ಪ್ರಧಾನ ಕಾರ್ಯದರ್ಶಿ ಎಂ ಬಿ ಬಸವರಾಜ ಆರೋಪ

**ಹಂಪಿ ಟೈಮ್ಸ್ ಹೂವಿನ ಹಡಗಲಿ**
ಸಿದ್ದರಾಮಯ್ಯ ನೇತೃತ್ವದ ರಾಜ್ಯ ಸರ್ಕಾರ ಅಧಿಕಾರ ದಾಹಕ್ಕಾಗಿ ಅವೈಜ್ಞಾನಿಕ ಯೋಜನೆಗಳನ್ನು ಜಾರಿಗೆ ತಂದು ಸಾರಿಗೆ ಇಲಾಖೆಯನ್ನು ದಿವಾಳಿ ಮಾಡಲು ಹೊರಟಿದೆ ಎಂದು ವಿಜಯನಗರ ಜಿಲ್ಲಾ ಬಿಜೆಪಿ ಪಕ್ಷದ ಪ್ರಧಾನ ಕಾರ್ಯದರ್ಶಿ ಎಂ ಬಿ ಬಸವರಾಜ ಆರೋಪಿಸಿದರು.



ಪತ್ರಿಕಾ ಹೇಳಿಕೆಯಲ್ಲಿ ಜನರಿಗೆ ದಾರಿ ತಪ್ಪಿಸಿ. ಆರ್ಥಿಕ ಹೊರೆ ನೀಡುವ ಗ್ಯಾರಂಟಿಗಳನ್ನು ಜಾರಿ ಮಾಡಿ ರಾಜ್ಯ ಖಜಾನೆಯನ್ನು ಸಿದ್ದರಾಮಯ್ಯ ಸರ್ಕಾರ ಖಾಲಿ ಮಾಡಿದೆ. ಶಕ್ತಿ ಯೋಜನೆಗೆ ಮಾರ್ಚ್ ತಿಂಗಳವರೆಗೆ ಸುಮಾರು 2800ಕೋಟಿ ರೂಪಾಯಿ ಅಂದಾಜು ಮಾಡಲಾಗಿತ್ತು. ಆದರೆ ಡಿಸೆಂಬರ್ ಅಂತ್ಯಕ್ಕೂ ಮೊದಲೆ ಮೀಸಲಿಟ್ಟ ಹಣ ಸಂಪೂರ್ಣ ಖಾಲಿಯಾಗಿದೆ. ಮೀಸಲಿಟ್ಟ 2,800ಕೋಟಿಯಲ್ಲಿ 2,778ಕೋಟಿ ಹಣ ಈಗಾಗಲೇ ಶಕ್ತಿ ಯೋಜನೆಗೆ ಬಳಕೆಯಾಗಿ ಅನುದಾನದ ಕೊರತೆ ಉಂಟಾಗಿ ಸಾರಿಗೆ ನಿಗಮಗಳು ಪೇಚಿಗೆ ಸಿಲುಕಿವೆ. ಇದು ಸಾರಿಗೆ ಸಚಿವರಿಗೂ ನುಂಗಲಾರದ ತುತ್ತಾಗಿದೆ. ಇತ್ತ ಶಕ್ತಿ ಯೋಜನೆ 10 ವರ್ಷಗಳವರೆಗೆ ಮುಂದುವರೆಯಲಿದೆ ಎಂದು ಸಚಿವ ರಾಮಲಿಂಗಾರೆಡ್ಡಿ ಹೇಳಿರುವುದು ಹಾಸ್ಯಾಸ್ಪದ ವಾಗಿದೆ.

ರಾಜ್ಯದಲ್ಲಿ ಶಕ್ತಿ ಯೋಜನೆ ಜೂನ್ 11ರಂದು ಜಾರಿಯಾಗಿತ್ತು. ಜೂನ್ 11ರಿಂದ ಡಿಸೆಂಬರ್ 17ವರೆಗೆ ಶಕ್ತಿಯೋಜನೆಯಡಿ ಬರೋಬ್ಬರಿ 31,73,48,773 ಮಹಿಳೆಯರು ಪ್ರಯಾಣಿಸಿದ್ದಾರೆ. ಶಕ್ತಿಯೋಜನೆಯಡಿ ಪ್ರಯಾಣಿಸಿದ ಮಹಿಳೆಯರ ಟಿಕೆಟ್ ಮೌಲ್ಯ 2778,72,85,831,ರಷ್ಟಾಗಿದ್ದು. ರಾಜ್ಯ ಸರ್ಕಾರ ಶೀಘ್ರವಾಗಿ ಅನುದಾನ ಬಿಡುಗಡೆ ಮಾಡದಿದ್ರೆ ಸಂಕಷ್ಟಕ್ಕೆ ಸಾರಿಗೆ ನಿಗಮಗಳು ಸಿಲುಕಲಿವೆ. ಇದರಿಂದ ನೌಕರರ ಸಂಬಳಕ್ಕೂ ಕುತ್ತು ಬೀಳುವ ಸಾಧ್ಯತೆ ಇದೆ. ಹಾಗಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಹಣ ಬಿಡುಗಡೆ ಮಾಡಿ ಸಾರಿಗೆ ನಿಗಮ ಮತ್ತು ನೌಕರರನ್ನು ಕಾಪಾಡಬೇಕಿದೆ. ಗ್ಯಾರಂಟಿಗಳು ಜನಪರ ಇರಬೇಕು ಹೊರತು. ಜನರ ಜೀವನ ದುಸ್ತರವಾಗಿಸಬಾರದು. ರಾಜ್ಯ ಸರ್ಕಾರದ ವಿರುದ್ಧ ಜನ ಸಾಮಾನ್ಯರು ರೊಚ್ಚಿಗೆದ್ದಿದ್ದಾರೆ. 2024ರ ಲೋಕಸಭಾ ಚುನಾವಣೆಯಲ್ಲಿ ತಕ್ಕ ಪಾಠ ಕಲಿಸುತ್ತಾರೆ. ನರೇಂದ್ರ ಮೋದಿಯವರು ಮತ್ತೊಮ್ಮೆ ಈ ದೇಶದ ಪ್ರಧಾನಿಗಳಾಗಿ ಹಿಂದೆಂದೂ ಕಂಡರಿಯದ ರೀತಿಯಲ್ಲಿ ಭಾರತ ದೇಶವನ್ನು ಅಭಿವೃದ್ಧಿ ಪಡಿಸುತ್ತಾರೆ ಎಂದರು.

# ಗಣಿತ ಕಬ್ಬಿಣದ ಕಡಲೆ ಅಲ್ಲ

## ತಿರಸ್ಕರಿಸದೆ ಇಷ್ಟಪಟ್ಟರೆ ಸುಲಭ ಎಂದ ಶಿಕ್ಷಕರು




**ಹಂಪಿ ಟೈಮ್ಸ್ ಹೂವಿನ ಹಡಗಲಿ**
ಗಣಿತವು ಎಲ್ಲಾ ವಿಜ್ಞಾನಗಳ ತಾಯಿ. ಮಕ್ಕಳು ಗಣಿತ ಕಲಿಕೆಯಲ್ಲಿ ಆಸಕ್ತಿ ಬೆಳೆಸಿಕೊಳ್ಳಬೇಕು ಎಂದು ಗಣಿತ ಶಿಕ್ಷಕ ಸಂಗಮೇಶ ಸುಂಕದ ಪ್ರಸಾದ್ ಹೇಳಿದರು. ಪಟ್ಟಣದ ತುಂಗಭದ್ರಾ ಪ್ರೌಢಶಾಲೆಯಲ್ಲಿ ಶುಕ್ರವಾರ ಆರ್ಯಭಟ ಮೇಡಂಕ್ಯೂರಿ ಗಣಿತ ವಿಜ್ಞಾನ ವೇದಿಕೆ ವತಿಯಿಂದ ಆಯೋಜಿಸಿದ್ದ ರಾಷ್ಟ್ರೀಯ ಗಣಿತ ದಿನಾಚರಣೆ ಕಾರ್ಯಕ್ರಮದಲಿ ಮಾತನಾಡಿದರು. ಜೆ.ಹೆಚ್.ಹಾರ್ಡಿ ಅವರ ಶೈಕ್ಷಣಿಕ ಮಾರ್ಗದರ್ಶನದಲ್ಲಿ ಅತ್ಯಂತ ಕಡಿಮೆ ವಯಸ್ಸಿನಲ್ಲೇ ಉನ್ನತ ಸಾಧನೆ ಮಾಡಿದ್ದಾರೆ. ಹೊಸ ಆವಿಷ್ಕಾರದ ಕಡೆಗೆ ರಾಮಾನುಜನ್ ಮನಸ್ಸು ಸೆಳೆಯುತ್ತಿತ್ತು. ರಾಯಲ್ ಸೊಸೈಟಿಯಿಂದ ಗೌರವ ದೊರತದ್ದನ್ನು ಸ್ಮರಿಸಿದರು.

ಚಿತ್ರಕಲಾ ಶಿಕ್ಷಕರಾದ ದ್ವಾರಕೀಶ್ ರೆಡ್ಡಿ ಮಾಜಿ ಪ್ರಧಾನಿ ಮನಮೋಹನ್ ಸಿಂಗ್ ರಾಮಾನುಜನ್ ಅವರ 125 ನೇ ಜನ್ಮದಿನಾಚರಣೆ ನೆನಪಿಗೆ ದೇಶದಲ್ಲಿ 2012 ರಿಂದ ರಾಷ್ಟ್ರೀಯ ಗಣಿತ ದಿನಾಚರಣೆ ಘೋಷಣೆ ಮಾಡಿದ್ದಾರೆ ಎಂದರು.

ಮುಖ್ಯ ಗುರುಗಳಾದ ಸುರೇಶ ಅಂಗಡಿ ಗಣಿತವು ಕಬ್ಬಿಣದ ಕಡಲೆ ಅಲ್ಲ, ಇಷ್ಟ ಪಟ್ಟು ಆಸಕ್ತಿಯಿಂದ ಕಲಿತರೆ ಅದಕ್ಕಿಂತ ಸುಲಭ ವಿಷಯ ಯಾವುದೂ ಇಲ್ಲ. ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳು ಗಣಿತ ವಿಜ್ಞಾನ ವಿಷಯಕ್ಕೆ ಹೆಚ್ಚಿನ ಆದ್ಯತೆ ನೀಡಿರಿ ಎಂದು ಹೇಳಿದರು. ಶಿಕ್ಷಕರಾದ ಬಸಪ್ಪ ಕೆ ಪ್ರತಿಮಾ ಎನ್ ಲಂಬಾಣಿ ಗಿಡ್ಡಾನಾಯ್ಕ್ ರೇಖಾ ಎಸ್ ಆನಂದ್ ಜಿ ವೈ ಜಯಮ್ಮ ಸಂತೋಷ್ ಕುಮಾರ್ ಎಸ್ ಇತರರು ಉಪಸ್ಥಿತರಿದ್ದರು.

# ಹನುಮ ಮಾಲಾಧಾರಿಗಳ ಸಂಖ್ಯೆ ಹೆಚ್ಚಳ

## ಯುವಕರಲ್ಲಿ ಹೆಚ್ಚಿದ ಧರ್ಮ, ಸಂಸ್ಕಾರ, ಭಕ್ತಿ



**ಹಂಪಿ ಟೈಮ್ಸ್ ಮರಿಯಮ್ಮನಹಳ್ಳಿ**
ಪ್ರಭು ಶ್ರೀರಾಮಚಂದ್ರನ ಪರಮಭಕ್ತ ಆಂಜನೇಯಸ್ವಾಮಿಯ ಹನುಮಮಾಲಾ ವ್ರತದ, ಮಾಲಾವಿಸರ್ಜನಾ ಹಾಗು ಪವಮಾಮ ಹೋಮ ಭಾನುವಾರ ಪಟ್ಟಣದ ಆರಾಧ್ಯದೈವಗಳಾದ ಶ್ರೀಲಕ್ಷ್ಮೀನಾರಾಯಣಸ್ವಾಮಿ, ಶ್ರೀ ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ನಡೆಯಿತು.

ಹನುಮಮಾಲಾ ವ್ರತವು ವರ್ಷದಿಂದ ವರ್ಷಕ್ಕೆ ಹೋಬಳಿವ್ಯಾಪ್ತಿಯಲ್ಲಿ ಹೆಚ್ಚುತ್ತಿದ್ದು, ಯುವಕರಲ್ಲಿ ಧರ್ಮ, ಸಂಸ್ಕಾರ, ಭಕ್ತಿಯು ಹೆಚ್ಚುತ್ತಿರುವುದು ಸಾಬೀತುಪಡಿಸುತ್ತಿದೆ. ವ್ರತವು 21, 11, 9, 5 ಹಾಗು 3ದಿನಗಳ ಕಾಲ ಅವರವರ ಸಂಕಲ್ಪ, ಅನುಕೂಲಕ್ಕೆ ತಕ್ಕಂತೆ ಆಚರಿಸುವುದು ವ್ರತದ ನಿಯಮ. ಅದರಂತೆ ಈ ಬಾರಿ ಪಟ್ಟಣಸೇರಿದಂತೆ ಡಣಾಪುರ, ನಾಗಲಾಪುರ, ಗೊಲ್ಲರಹಳ್ಳಿ, ಚಿಲಕಹಟ್ಟಿ, ತಿಮ್ಮಲಾಪುರ, ನಂದಿಬಂಡಿ, ಅಯ್ಯನಹಳ್ಳಿ, ವ್ಯಾಸನಕೆರೆ, ಗರಗ ಗ್ರಾಮಗಳಲ್ಲಿ 4–5ನೂರು ಭಕ್ತರು ಹನುಮ ಮಾಲಾಧಾರಿಗಳಾಗಿ ವ್ರತವನ್ನು ಆಚರಿಸಿದರು. ವ್ರತದ ಕೊನೆಯದಿನ ಭಾನುವಾರದಂದು ಪಟ್ಟಣದ ಆರಾಧ್ಯ ದೈವದ ದೇವಸ್ಥಾನದಲ್ಲಿ ಪವಮಾನಹೋಮ, ಭಜನೆಗಳು ನಡೆದವು ನಂತರ ಮಾಲಾ ವಿಸರ್ಜನೆ ಮತ್ತು ಭಕ್ತಗಣಕ್ಕೆ ಪ್ರಸಾದ ವಿತರಣೆ ನಡೆಯಿತು.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA